Navachethana education YouTube & telegram channel Copy Right Reserved

# ಯೂರೋಪ್

## ( ಏಷ್ಯಾದ ಪರ್ಯಾಯ ದ್ವೀಪ )

- ಪ್ರಪಂಚದ ಹೆಚ್ಚು ಜನಸಾಂದ್ರತೆ ಹಾಗೂ ನಗರೀಕರಣ ಗೊಂಡ ಭೂಖಂಡಗಳಲ್ಲಿ ಯೂರೋಪ್ ಒಂದಾಗಿದೆ.
- ಇದು ಸಮೃದ್ಧ ಮತ್ತು ಕೈಗಾರಿಕೀಕರಣಗೊಂಡ ಭೂಖಂಡ ವಿಸ್ತೀರ್ಣದಲ್ಲಿ ಪ್ರಪಂಚದ ಆರನೇಯ ಸ್ಥಾನದಲ್ಲಿದೆ.
- ಅನೇಕ ದೊಡ್ಡ ಹಾಗೂ ಸಣ್ಣ ದೇಶಗಳನ್ನು ಹೊಂದಿದ್ದು, ಅವುಗಳ ಒಟ್ಟು ಸಂಖ್ಯೆ 56

### ಸ್ಥಾನ, ವಿಸ್ತೀರ್ಣ ಮತ್ತು ಭೌಗೋಳಿಕ ಸನ್ನಿವೇಶ

**ಸ್ಥಾನ**: ಯೂರೋಪ್ 10°ಪಶ್ಚಿಮದಿಂದ 60° ಪೂರ್ವ ರೇಖಾಂಶ ಹಾಗೂ 36° ಉತ್ತರದಿಂದ 72° ಉತ್ತರ ಅಕ್ಷಾಂಶಗಳಲ್ಲಿ ನೆಲೆಗೊಂಡಿದೆ.

**ವಿಸ್ತೀರ್ಣ**:

- ಯೂರೋಪ್ ಪ್ರಪಂಚದ ಎರಡನೆಯ ಚಿಕ್ಕ ಭೂಖಂಡ. ಅದರ ಒಟ್ಟು ವಿಸ್ತೀರ್ಣ 10.4 ಮಿಲಿಯನ್ ಚ.ಕಿ.ಮೀ.ಗಳು.
- ಇದು ಭಾರತದ ವಿಸ್ತೀರ್ಣಕ್ಕಿಂತ ಮೂರು ಪಟ್ಟು ದೊಡ್ಡದು. ಈ ಖಂಡವು ಪೃಥ್ವಿಯ ಒಟ್ಟು ವಿಸ್ತೀರ್ಣದಲ್ಲಿ ಶೇ.7 ಭಾಗವನ್ನು ಹೊಂದಿದೆ. ಆದರೆ ಪ್ರಪಂಚದ ಜನಸಂಖ್ಯೆಯಲ್ಲಿ 1/4 ಭಾಗವನ್ನು ಹೊಂದಿದೆ.

**ಭೌಗೋಳಿಕ ಸನ್ನಿವೇಶ:**

6ನೇ ತರಗತಿಯ ಸಮಾಜ ವಿಜ್ಞಾನ (ಭೂಗೋಳ ) ಪರಿಷ್ಕೃತ ಮುದ್ರಣ 2022



Scanned with OKEN Scanner

Navachethana education YouTube & telegram channel Copy Right Reserved

ಯೂರೋಪ್ ಏಷ್ಯಖಂಡದ ಪರ್ಯಾಯ ದ್ವೀಪ,ಈ ಖಂಡವು ಮೂರು ಕಡೆ ನೀರಿನಿಂದಾವರಿಸಿದೆ

- ಉತ್ತರದಲ್ಲಿ ಬೇರೆಂಟ್ ಸಮುದ್ರ,
- ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರ
- ದಕ್ಷಿಣದಲ್ಲಿ ಮೆಡಿಟರೇನಿಯನ್ ಸಮುದ್ರಗಳು ಆವರಿಸಿವೆ.

- ಯೂರೋಪಿನ ಪೂರ್ವಭಾಗದಲ್ಲಿ ಏಷ್ಯ ಖಂಡವಿದ್ದು, ಅದನ್ನು ಯೂರಲ್ಸ್ ಪರ್ವತ. ಕಕಾಸಸ್ ಪರ್ವತ ಮತ್ತು ಕ್ಯಾಸ್ಪಿಯನ್ ಸಮುದ್ರಗಳು ಯೂರೋಪಿನಿಂದ ಬೇರ್ಪಡಿಸುತ್ತವ
- ದಕ್ಷಿಣಭಾಗಕ್ಕೆ ಆಫ್ರಿಕ ಖಂಡವಿದೆ.

ಆದರೆ ಮೇಲೆ ಹೇಳಿದ ಭೌಗೋಳಿಕ ಸ್ವರೂಪಗಳೇನು ಯೂರೋಪ್ ಮತ್ತು ಏಷ್ಯಗಳ ನಡುವಣ ಸುಭದ್ರ ಗಡಿಗಳಾಗಿರುವುದಿಲ್ಲ. ಹೀಗಾಗಿ ಇದನ್ನು 'ಯೂರೇಷ್ಯ' ಎಂದು ಒಂದೇ ಹೆಸರಿನಿಂದ ಕರೆಯಲಾಗುತ್ತದೆ.

## 2. ಪ್ರಾಕೃತಿಕ ಲಕ್ಷಣಗಳು

1. ಯುರೋಪ್ ಖಂಡದ ಅತಿ ಎತ್ತರವಾದ ಶಿಖರ ಯಾವುದು - ಯೂರೋಪ್ ಖಂಡದ ಅತಿ ಎತ್ತರವಾದ ಬಿಂದು ಕಕಾಸಸ್ ಪರ್ವತ ಸರಣಿ ಮೌಂಟ್ ಎಲ್‌ಬ್ರುಸ್ ಶಿಖರ (5633 ಮೀ),

2. ಯುರೋಪ್ ಖಂಡದ ಅತ್ಯಂತ ತಗ್ಗಾದ ಸ್ಥಳ - ಕ್ಯಾಸ್ಪಿಯನ್ ಸಮುದ್ರ
ಇದು ಸಮುದ್ರ ಮಟ್ಟಕ್ಕೆ 28 ಮೀ. ತಗ್ಗಿನಲ್ಲಿದೆ.

3. ಏಷಿಯನ್ ಭೂರಾಶಿಯಲ್ಲಿ ಯೂರೋಪ್ ಒಂದು ದೊಡ್ಡ ಪರ್ಯಾಯ ದ್ವೀಪ



Scanned with OKEN Scanner

4. ಯುರೋಪ್ ಖಂಡದ ದ್ವೀಪಗಳು ಯಾವುವು - ಸ್ಕಾಂಡಿನೇವಿಯ, ಐಬೀರಿಯ, ಜಟ್‌ಲ್ಯಾಂಡ್, ಬಾಲ್ಕನ್

5."ಪರ್ಯಾಯ ದ್ವೀಪಗಳ ಪರ್ಯಾಯ ದ್ವೀಪ" ಎಂದು ಯಾವ ಖಂಡವನ್ನು ಕರೆಯುತ್ತಾರೆ

- ಯುರೋಪ್

- ಯೂರೋಪಿನಲ್ಲಿ 80,500 ಕಿ.ಮೀ ಉದ್ದವುಳ್ಳ ಒಳಚಾಚುಗಳನ್ನುಳ್ಳ ಸಮುದ್ರ ತೀರವಿದೆ. ಅದು ಏಷ್ಯ ಖಂಡದ ತೀರಕ್ಕಿಂತಲೂ ಉದ್ದವಾದುದು.
- ಈ ಖಂಡದ ತೀರದುದ್ದಕ್ಕೂ ಐವಿರಾರು ದ್ವೀಪಕಲ್ಪಗಳಿವೆ, ಅವುಗಳಲ್ಲಿ ಬ್ರಿಟನ್ ಮತ್ತು ಐರ್ಲೆಂಡ್ ದೊಡ್ಡವು

ಪ್ರಾಕೃತಿಕ ವಿಭಾಗಗಳು

1..ವಾಯವ್ಯ ಎತ್ತರದ ಭಾಗಗಳು

- ಈ ಪ್ರಾಕೃತಿಕ ವಿಭಾಗವು ಅತ್ಯಂತ ಪುರಾತನ ಪರ್ವತ ಸರಣಿಗಳನ್ನುಳ್ಳ ಫಿನ್‌ಲ್ಯಾಂಡ್, ಸ್ವೀಡನ್, ನಾರ್ವೆಗಳನ್ನೊಳಗೊಂಡಿದ್ದು, ಐಸ್ ಲ್ಯಾಂಡ್ ಮತ್ತು ಬ್ರಿಟನ್ ವರೆಗೂ ವಿಸ್ತರಿಸಿದೆ.
- ಇವು ಅವಶೇಷ ಪರ್ವತಗಳು, ಹಿಮನದಿಗಳ ಸವೆತದಿಂದಾಗಿ ಕಡಿಮೆ ಎತ್ತರವನ್ನು ಹೊಂದಿವೆ. ಅವು ಪುರಾತನ ಶಿಲೆಗಳಿಂದ ರಚಿತವಾಗಿವೆ.
- ಗೋಲ್ಡೊಪಿಗ್ಗೆನ್ (2469 ಮೀ.) ಈ ವಿಭಾಗದ ಅತ್ಯಂತ ಎತ್ತರವಾದ ಶಿಖರ (ನಾರ್ವೆ)





Scanned with OKEN Scanner

Navachethana education YouTube & telegram channel Copy Right Reserved

## 2. ಉತ್ತರ ಯೂರೋಪ್ ಮೈದಾನಗಳು

- ಇದನ್ನು ಕೇಂದ್ರದ ತಗ್ಗು ಭಾಗಗಳು'ಎಂತಲೂ ಕರೆಯಲಾಗುತ್ತದೆ. ಇದು ಪೂರ್ವದಲ್ಲಿ ಯೂರಲ್ ಪರ್ವತಗಳಿಂದ ಪಶ್ಚಿಮದಲ್ಲಿ ಅಟ್ಲಾಂಟಿಕ್ ತೀರದವರೆಗೆ ವಿಸ್ತರಿಸಿದೆ.
- ಯೂರೋಪಿನ ಬಹಳಷ್ಟು ಭಾಗವು ಈ ಭಾಗದಲ್ಲಿದೆ. ಇದರಲ್ಲಿ . ಯೂರೋಪಿಯನ್ ರಷ್ಯ, ಪೋಲೆಂಡ್, ಉತ್ತರ ಜರ್ಮನಿ, ನೆದರ್ಲೆಂಡ್ಸ್ (ಹಾಲೆಂಡ್ ), ಡೆನ್ಮಾರ್ಕ್, ಬೆಲ್ಜಿಯಂ, ಉತ್ತರ ಫ್ರಾನ್ಸ್ ಹಾಗೂ ಇಂಗ್ಲೆಂಡ್‌ನ ಪೂರ್ವಭಾಗಗಳು ಸೇರಿವೆ.
- ಇಲ್ಲಿ ಪ್ರಪಂಚದಲ್ಲೇ ಪ್ರಖ್ಯಾತ ಫಲವತ್ತಾದ ಕೃಷಿ ಭೂಮಿಗಳಿವೆ.

## 3. ಕೇಂದ್ರದ ಎತ್ತರವಾದ ಭಾಗಗಳು

- ಇದು ಪುರಾತನ ಶಿಲೆಗಳಿಂದ ರಚನೆಗೊಂಡಿದ್ದು, ಹಲವು ಪುರಾತನ ಪರ್ವತ, ಬೆಟ್ಟ ಮತ್ತು ಪೀಠ ಭೂಮಿಗಳನ್ನು ಒಳಗೊಂಡಿದೆ

## 4. ದಕ್ಷಿಣದ ಪರ್ವತಗಳು:

- ಈ ವಿಭಾಗವನ್ನು ಆಲ್ಪೈನ್ ಪರ್ವತಗಳ ಭಾಗ' ವೆಂತಲೂ ಕರೆಯಲಾಗಿದೆ. ಇದರಲ್ಲಿ ಅನೇಕ ಪರ್ವತ ಸರಣಿಗಳವೆ - ಸಿಯೆರ್ರಮೊರೇನ, (ಸ್ಪೇನ್),
- ಫ್ರಾನ್ಸ್ ಮತ್ತು ಸ್ಪೇನ್‌ಗಳ ಮಧ್ಯದಲ್ಲಿ ಗಡಿಯಂತಿರುವ ಪಿರನೀಸ್ ಪರ್ವತಗಳು
- ಇವು ಪಶ್ಚಿಮದಲ್ಲಿ ಅಟ್ಲಾಂಟಿಕ್ ತೀರದಿಂದ ಪೂರ್ವದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೂ ಒಂದಕ್ಕೊಂದು ಸಮಾನಾಂತರ ಸರಣಿಗಳಾಗಿ ಹಬ್ಬಿವೆ. ಇವು ಹಿಮಾಲಯಗಳಂತೆ ಮಡಿಕೆ ಪರ್ವತಗಳಾಗಿವೆ.
- ಈ ಭಾಗದಲ್ಲಿ ಆಲ್ಪ್ಸ್ ಪರ್ವತಗಳು ಮುಖ್ಯವಾದವು.
- ಇಲ್ಲಿನ ಅತ್ಯಂತ ಶಿಖರವೆಂದರೆ ಮೌಂಟ್ ಬ್ಲಾಂಕ್ (4807 ಮೀ).



Scanned with OKEN Scanner

Navachethana education YouTube & telegram channel Copy Right Reserved

ಯೂರೋಪ್ ಖಂಡದ ಹೆಚ್ಚಿನ ಭಾಗವು ಸಮಶೀತೋಷ್ಣವಲಯದ ವಾಯುಗುಣವನ್ನು ಹೊಂದಿದೆ. ಇದನ್ನು ಹಿತಕರ ವಾಯುಗುಣ ಎಂತಲೂ ಕರೆಯಲಾಗಿದೆ.

ಹೆಚ್ಚು ಉಷ್ಣಾಂಶ, ಶುಷ್ಕ ಮತ್ತು ಬಿಸಿಲಿನಿಂದ ಕೂಡಿದ ಬೇಸಿಗೆ ಹಾಗೂ ಸ್ವಲ್ಪ ಮಳೆ ಬೀಳುವ ಹಿತಕರವಾದ ಚಳಿಗಾಲಗಳು ಈ ವಾಯುಗುಣದ ಪ್ರಮುಖ ಗುಣಲಕ್ಷಣಗಳು - ಯೂರೋಪ್ ನ ಮೆಡಿಟರೇನಿಯನ್ ವಾಯುಗುಣ ಪ್ರದೇಶ

## ಯೂರೋಪ್ ನ ಸ್ವಾಭಾವಿಕ ಸಸ್ಯವರ್ಗ

### ತಂಡ್ರ ಸಸ್ಯವರ್ಗವು

- ಶಿಲಾವಲ್ಕ ಮತ್ತು ಪಾಚಿಗಳಿಂದ (Lichens and mosses) ಕೂಡಿದೆ.
- ಇದು ಐಸ್‌ಲ್ಯಾಂಡ್, ಉತ್ತರ ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್ ಗಳನ್ನೊಳಗೊಂಡ ಕಿರಿದಾದ ಪ್ರದೇಶದಲ್ಲಿ ಕಂಡುಬರುವುದು.
- ಇಂತಹದೇ ಸಸ್ಯವರ್ಗ ಆಲ್ಪ್ ಮತ್ತು ಉತ್ತರ ಯೂರಲ್ಸ್ ಪರ್ವತಗಳ ಎತ್ತರದ ಭಾಗಗಳಲ್ಲಿ ಕಂಡುಬರುವುದು.

### ತೈಗ ಅರಣ್ಯಗಳು

- ನಾರ್ವೆ, ಸ್ವೀಡನ್ ಮತ್ತು ಫಿನ್‌ಲೆಂಡ್‌ಗಳನ್ನೊಳಗೊಂಡ ಧ್ರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳನ್ನು ಶಂಖುವಿನಾಕಾರದ ಮರಗಳ ಕಾಡು' ಎಂತಲೂ ಕರೆಯಲಾಗಿದೆ



Scanned with OKEN Scanner

Navachethana education YouTube & telegram channel Copy Right Reserved

- ಇಲ್ಲಿ ಕೆಲವೇ ವಿಭೇದದ ಮರಗಳು ಬೆಳೆಯುತ್ತವೆ. ಉದಾ: ಸ್ಕ್ಯಾಟ್ಸ್ ಪೈನ್ ಸ್ಪ್ರೂಸ್ ಮತ್ತು ಲಾರ್ಚ್. ಅವು ಮೊನಚಾದ ಎಲೆಗಳನ್ನು ಹೊಂದಿದ್ದು ಶಂಕುವಿನಾಕಾರವನ್ನು ಹೊಂದಿದೆ

## ಮಿಶ್ರ ಕಾಡುಗಳು

- ದಕ್ಷಿಣದ ಕೇಂದ್ರ ಪ್ರದೇಶದಲ್ಲಿ ಕಂಡುಬರುತ್ತವೆ.
- ಇವುಗಳಲ್ಲಿ ಎಲೆ ಉದುರಿಸುವ ಮತ್ತು ಶಂಕುವಿನಾಕಾರದ ಮರಗಳು ಬೆಳೆಯುತ್ತವೆ. ಪ್ರಮುಖವಾದ ಮರಗಳೆಂದರೆ ಓಕ್, ಆಶ್, ಎಲ್ಮ್, ವಿಲ್ಲೊ, ಬೀಚ್

## ಮೆಡಿಟರೇನಿಯನ್ ಸಸ್ಯವರ್ಗ

- ಸಾಮಾನ್ಯವಾಗಿ ಮೆಡಿಟರೇನಿಯನ್ ಸಮುದ್ರದ ತೀರದುದ್ದಕ್ಕೂ ಕಂಡುಬರುವುದು.
- ಇದು ಅಗಲ ಎಲೆಗಳನ್ನುಳ್ಳ ಸದಾ ಹಸಿರಾದ ಸಸ್ಯವರ್ಗ ಏಕೆಂದರೆ ಶರತ್ಕಾಲದಲ್ಲಿ ಮರಗಳು ತಮ್ಮ ಎಲೆಗಳನ್ನು ಉದುರಿಸುವುದಿಲ್ಲ. ಕಾರ್ಕ್ಓಕ್, ಆಲಿವ್, ಲಾರೆಲ್ ಮುಂತಾದ ಮರಗಳು ಇಲ್ಲಿ ಬೆಳೆಯುತ್ತವೆ.

## ಹುಲ್ಲುಗಾವಲು

- ದಕ್ಷಿಣ ಭಾಗದ ಎಲೆ ಉದುರಿಸುವ ಅರಣ್ಯಗಳಲ್ಲಿ ಕಂಡು ಬರುತ್ತದೆ. ಉದಾ: ಹಂಗೇರಿ, ಬಳ್ಗೇರಿಯ, ರುಮೇನಿಯ ಮತ್ತು ಯೂರೋಪಿಯನ್ ರಷ್ಯ, ಇದು ವಿರಳ ಮರಗಳು ಮತ್ತು ಹುಲ್ಲುಗಳನ್ನುಳ್ಳ ಸ್ಟೆಪ್ಪಿ ಸಸ್ಯವರ್ಗವಾಗಿದೆ.

## ಆಲ್ಪೈನ್ ಸಸ್ಯವರ್ಗ

- ಯೂರೋಪಿನ ದಕ್ಷಿಣ ಭಾಗದಲ್ಲಿ ಎತ್ತರವಾದ ಪರ್ವತ ಭಾಗಗಳಲ್ಲಿ ಹಂಚಿಕೆಯಾಗಿದೆ. ಉದಾ: ಆಲ್ಪ್ಸ್, ಪಿರನೀಸ್, ಬಾಲ್ಕನ್, ಕಾರ್ಪೇಥಿಯನ್ ಮತ್ತು ಡಿನಾರಿಕ್ ಪರ್ವತಗಳು





Scanned with OKEN Scanner

- ಯೂರೋಪಿನಲ್ಲಿ ಕೈಗಾರಿಕೀಕರಣದ ತರುವಾಯವೂ ವ್ಯವಸಾಯವು ಮುಖ್ಯ ವೃತ್ತಿಯಾಗಿ ಉಳಿದಿದೆ.
- ಸ್ಕಾಂಡಿನೇವಿಯನ್ ದೇಶಗಳನ್ನು ಹೊರತುಪಡಿಸಿ ಯೂರೋಪಿನ ಬಹಳಷ್ಟು ದೇಶಗಳು ಅವುಗಳ ವಿಸ್ತೀರ್ಣದಲ್ಲಿ ಶೇ.50ಕ್ಕೂ ಹೆಚ್ಚು ಭಾಗ ಕೃಷಿಗೊಳಪಟ್ಟಿವೆ.
- ಯೂರೋಪಿನ ಹೈನುಗಾರಿಕೆಯ ಅಭಿವೃದ್ಧಿಗೆ ಉತ್ತೇಜನವಾಗಿವೆ. ಡೆನ್ಮಾರ್ಕ್, ನೆದರ್ಲೆಂಡ್ಸ್, ಸಿಟ್ಜರ್ಲೆಂಡ್, ಜರ್ಮನಿ ಮತ್ತು ಬ್ರಿಟನ್‌ಗಳಲ್ಲಿ ಹೈನುಗಾರಿಕೆಯು ಹೆಚ್ಚು ಅಭಿವೃದ್ಧಿಗೊಂಡಿದೆ. ಆದರೆ ಡೆನ್ಮಾರ್ಕ್ ಅತ್ಯಂತ ಪ್ರಮುಖವಾದುದು.

## ಯೂರೋಪಿನ ಪ್ರಮುಖ ಮೀನುಗಾರಿಕಾ ವಲಯ

- ನಾರ್ವೆ, ಬ್ರಿಟನ್, ಡೆನ್ಮಾರ್ಕ್, ಸ್ವೀಡನ್ ಮತ್ತು ಜರ್ಮನಿಗಳು ಸೇರಿವೆ. ಡಾಗರ್ ಬ್ಯಾಂಕ್ ಮತ್ತು ಗ್ರೇಟ್ ಫಿಶರ್ ಬ್ಯಾಂಕ್ ಪ್ರದೇಶಗಳು ಉತ್ತರ ಸಮುದ್ರದ ಎರಡು ಪ್ರಸಿದ್ಧ ಮೀನುಗಾರಿಕಾ ಕೇಂದ್ರಗಳಾಗಿವೆ.

- ಡಾಗರ್ ಬ್ಯಾಂಕ್ ಎಂದರೆ GPSTR, 2015
    - ಮೀನುಗಾರಿಕಾ ಪ್ರದೇಶ

- ಸ್ಕಾಂಡಿನೇವಿಯ ಉತ್ತರ ಯೂರೋಪಿನ ಭಾಗವಾಗಿದ್ದು, ನಾರ್ವೆ, ಸ್ವೀಡನ್, ಮತ್ತು ಪಿನ್‌ಲ್ಯಾಂಡ್‌ಗಳನ್ನೊಳಗೊಂಡಿದೆ.



Scanned with OKEN Scanner

Navachethana education YouTube & telegram channel Copy Right Reserved

- ಬ್ರಿಟನ್ ಅಥವಾ ಗ್ರೇಟ್ ಬ್ರಿಟನ್ ಯೂರೋಪಿನ ಬಹುದೊಡ್ಡ ದ್ವೀಪವಾಗಿದ್ದು ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ವೇಲ್ಸ್ ಗಳನ್ನೊಳಗೊಂಡಿದೆ. ಉತ್ತರ ಐರ್ಲೆಂಡ್‌ನ್ನೂ ಸೇರಿಸಿಕೊಂಡು ಇದು ಸಂಯುಕ್ತ ರಾಜ್ಯ(ಯು.ಕೆ.)ವಾಗಿದೆ.

- ಸುಮಾರು 500 ವರ್ಷಗಳಿಗೂ ಹೆಚ್ಚು ಕಾಲ ಯೂರೋಪನ್ನು ಪ್ರಪಂಚದ ಹೃದಯ ಭಾಗವೆಂದು ಕರೆಯಲಾಗಿತ್ತು.

- ಬ್ಲಾಕ್ ಫಾರೆಸ್ಟ್ ಎಂದರೆ ಅದೊಂದು ಪರ್ವತ ಪ್ರದೇಶ

## ಆಫ್ರಿಕ - (ಕೇಂದ್ರೀಯ ಭೂಖಂಡ )

- ಆಫ್ರಿಕ - ಖಂಡವು ಏಷ್ಯದ ನಂತರ ಪ್ರಪಂಚದ ಎರಡನೆಯ ಅತ್ಯಂತ ದೊಡ್ಡ ಖಂಡವಾಗಿದೆ.
- ಇದು ಜನ ಸಂಖ್ಯೆಯಲ್ಲಿ ಎರಡನೆಯ ಸ್ಥಾನದಲ್ಲಿದೆ. ಇತ್ತೀಚಿನ ವರ್ಷಗಳವರೆಗೂ ಆಫ್ರಿಕ ಖಂಡವನ್ನು 'ಕತ್ತಲೆಯ ಖಂಡ' ವೆಂದು ಕರೆಯಲಾಗುತ್ತಿತ್ತು.
- ಆಫ್ರಿಕ 52 ದೇಶಗಳನ್ನು ಹೊಂದಿದೆ

### ಸ್ಥಾನ

- ಆಫ್ರಿಕ ಖಂಡವು 37° ಡಿಗ್ರಿ ಉತ್ತರ ಮತ್ತು 35° ದಕ್ಷಿಣ ಅಕ್ಷಾಂಶ ಹಾಗೂ 17° ಪಶ್ಚಿಮ ಮತ್ತು 50° ಪೂರ್ವ ರೇಖಾಂಶಗಳ ನಡುವೆ ನೆಲಸಿದೆ.
- ಆಫ್ರಿಕದ ಪಶ್ಚಿಮ ಭಾಗದಲ್ಲಿ ಪ್ರಧಾನ ರೇಖಾಂಶವು ಉತ್ತರ-ದಕ್ಷಿಣವಾಗಿ ಹಾಯ್ದು ಹೋಗುತ್ತದೆ.



Scanned with OKEN Scanner

- ವಿಶೇಷ ಸಂಗತಿ ಎಂದರೆ ಈ ಖಂಡದಲ್ಲಿ ಕರ್ಕಾಟಕ ವೃತ್ತ ಮತ್ತು ಮಕರ ವೃತ್ತಗಳೆರಡೂ ಹಾಯ್ದುಹೋಗಿವೆ. ಭೂ ಮಧ್ಯರೇಖೆಯು ಹೆಚ್ಚು ಕಡಿಮೆ ಈ ಖಂಡದ ಮಾಧಭಾಗದಲ್ಲಿ ಹಾಯ್ದು ಹೋಗುವುದರಿಂದ ಇದನ್ನು ಕೇಂದ್ರೀಯ ಖಂಡವೆನ್ನುವರು.

## ವಿಸ್ತೀರ್ಣ

- ಆಫ್ರಿಕದ ಒಟ್ಟು ವಿಸ್ತೀರ್ಣ 30.4 ಮಿಲಿಯನ್ ಚ.ಕಿ.ಮೀ. ಇದು ದಕ್ಷಿಣೋತ್ತರವಾಗಿ 8000 ಕಿ.ಮೀ ಉದ್ದ ಹಾಗೂ ಪೂರ್ವ-ಪಶ್ಚಿಮವಾಗಿ 7400 ಕಿ.ಮೀ ಅಗಲವಾಗಿದೆ.

ಆಲ್ ಫಿರಮ್ ( ಟುನಿಸಿಯ ) - ಆಫ್ರಿಕ ಉತ್ತರ ತುದಿ

ಅಗುಲ್ಹಾಸ್ ( ದಕ್ಷಿಣ ಆಫ್ರಿಕ ) ಭೂಶಿರವು ದಕ್ಷಿಣ ತುದಿಯಾಗಿದೆ

## ಭೌಗೋಳಿಕ ಸನ್ನಿವೇಶ

ಆಫ್ರಿಕದ ಬಹುತೇಕ ಭೂಭಾಗವು ಒಂದಿಲ್ಲೊಂದು ಸಮುದ್ರ ಅಥವಾ ಮಹಾಸಾಗರಗಳಿಂದ ಸುತ್ತುವರೆಯಲ್ಪಟ್ಟಿದೆ.

- ಉತ್ತರದಲ್ಲಿ ಮೆಡಿಟರೇನಿಯನ್ ಸಮುದ್ರ
- ಪಶ್ಚಿಮಕ್ಕೆ ಅಟ್ಲಾಂಟಿಕ್ ಸಾಗರ
- ಪೂರ್ವಕ್ಕೆ ಕೆಂಪು ಸಮುದ್ರ ಹಾಗೂ ಹಿಂದೂ ಸಾಗರಗಳು ಸುತ್ತುವರಿದಿವೆ.

- ಹಿಂದೆ ಈ ಖಂಡದ ಈಶಾನ್ಯ ಭಾಗವು ಸಿನಾಯ್ ಪರ್ಯಾಯ ದ್ವೀಪದಿಂದ ಏಷ್ಯದೊಂದಿಗೆ ಜೋಡಣೆಯಾಗಿದ್ದು, ಈಗ ಅದು ಸೂಯೇಜ್ ಕಾಲುವೆಯಿಂದ ಪ್ರತ್ಯೇಕಗೊಂಡಿದೆ.





Scanned with OKEN Scanner

- ಜಿಬ್ರಾಲ್ಟರ್ ಜಲಸಂಧಿಯಿಂದ ಯೂರೋಪ್ ಖಂಡವೂ ಹಾಗೂ ಕೆಂಪು ಸಮುದ್ರದಿಂದ ಅರೇಬಿಯ ಪರ್ಯಾಯ ದ್ವೀಪ ಆಫ್ರಿಕದಿಂದ ಪ್ರತ್ಯೇಕಗೊಂಡಿದೆ.
- ಆಫ್ರಿಕ ಖಂಡದ ಸಮುದ್ರತೀರ 30500 ಕಿ.ಮೀ ಉದ್ದವಾಗಿದೆ

- ಆಫ್ರಿಕಾದ ಮಹಾಸೀಳು ಕಣಿವೆ ಉದ್ದ ಎಷ್ಟು - **6900 ಕಿ. ಮೀ**

- ಇಂಗ್ಲಿಷ್ ಅಕ್ಷರದ Y ಆಕಾರದಲ್ಲಿರುವ ಬಹುದೊಡ್ಡ ಸೀಳು ಕಣಿವೆ ಯಾವ ಖಂಡದಲ್ಲಿ ಕಂಡು ಬರುತ್ತದೆ - ಆಫ್ರಿಕ ಖಂಡ

🔰ಆಫ್ರಿಕದ ತಗ್ಗುಪ್ರದೇಶಗಳು

### 💢ಸುಡಾನ್ ತಗ್ಗುಪ್ರದೇಶ

- ಬಿಳಿ ಮತ್ತು ನೀಲಿ ನೈಲ್ ನದಿಗಳು ಹರಿಯುವ ಪ್ರದೇಶ.
- ಪ್ರಪಂಚದಲ್ಲೇ ಅತಿ ವಿಸ್ತಾರವಾಗಿರುವ ಈ ಜವುಗು ಭೂಮಿಯನ್ನು 'ಸಡ್' (Sudd) ಎಂದು ಕರೆಯುವರು.

### 💢 ಚಾಡ್ ತಗ್ಗುಪ್ರದೇಶ

- ಚಾಡ್ ಸರೋವರದಿಂದಾವರಿಸಿದೆ. ಇದೂ ಸಹ ಜವುಗು ಪ್ರದೇಶವಾಗಿದ್ದು, ಇದನ್ನು ಸಹಾರಾ ಮರುಭೂಮಿಯು ಆಕ್ರಮಿಸುತ್ತಿದೆ.

### 💢ಜೋಫ್ ತಗ್ಗು ಪ್ರದೇಶ

- ಸಹಾರಾ ಮರುಭೂಮಿಯು ಪಶ್ಚಿಮ ಭಾಗವನ್ನೊಳಗೊಂಡಿದೆ ಮತ್ತು ಮಾರಿಟಾನಿಯ - ಮಾಲಿ ಗಡಿಯ ಉದ್ದಕ್ಕೂ ಸಾಕಷ್ಟು ವಿಸ್ತರಿಸಿದೆ. ಈ ಮೂಲಕ ನೈಜರ್ ನದಿ ಹರಿಯುತ್ತದೆ.

### 💢ಕಾಂಗೊ( ಜೈರೆ ) ತಗ್ಗು ಪ್ರದೇಶ





Scanned with OKEN Scanner

- ಒಂದು ರಚನಾತ್ಮಕ ಭೂಸ್ವರೂಪವಾಗಿದ್ದು ಅದು ಪ್ರಸ್ಥಭೂಮಿಯಿಂದ ಸುತ್ತುವರಿಯಲ್ಪಟ್ಟಿದೆ.
- ಈ ಮೂಲಕ ಕಾಂಗೊ ಮತ್ತು ಅದರ ಉಪನದಿಗಳು ಹರಿಯುತ್ತವೆ. ಇದೊಂದು ಅರಣ್ಯ ಪ್ರದೇಶ,

**ಕಲಹರಿ ತಗ್ಗು ಪ್ರದೇಶ**

- ಬಹಳಷ್ಟು ಮಟ್ಟಿಗೆ ಮರುಭೂಮಿ ಮತ್ತು ಸ್ಟೆಪ್ಪಿ ಹುಲ್ಲುಗಾವಲಿನ ಭಾಗ, ಇದು ಪ್ರಸ್ಥಭೂಮಿಗಳಿಂದ ಸುತ್ತುವರಿದಿದೆ.

**ಆಫ್ರಿಕಾದ ಸೀಳು ಕಣಿವೆಯ ಪಶ್ಚಿಮಕ್ಕೆ ಇರುವ ಸರೋವರಗಳು**

- ಅಲ್ಬರ್ಟ್, ಎಡ್ವರ್ಡ್, ಕಿವು, ಟಾಂಗನಿಕ ಮತ್ತು ನ್ಯಾಸ

**ಆಫ್ರಿಕಾದ ಸೀಳು ಕಣಿವೆಯ ಪೂರ್ವಕ್ಕೆ ಇರುವ ಸರೋವರಗಳು**

- ರುಡಾಲ್ಫ್ (ಟುರ್ಕಾನ) ನಟೀನ್ ಮತ್ತು ಇಯಾಸಿ

**ಪ್ರಪಂಚದ ಎರಡನೆಯ ಅತಿ ಆಳವಾದ ಸರೋವರ ( ಆಫ್ರಿಕ ಖಂಡ )**

- ಟಾಂಗನಿಕ ಸಾರೋವರ

**ಆಫ್ರಿಕದ ಬಹು ದೊಡ್ಡ ಸರೋವರ ಯಾವುದು -** ವಿಕ್ಟೋರಿಯಾ ಸರೋವರ

**ಆಫ್ರಿಕ ಖಂಡವು ಹಲವು ಪರ್ವತಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾದವು**

- ಅಟ್ಲಾಸ್ ಸರಣಿ,
- ಡ್ರೇಕನ್ಸ್ ಬರ್ಗ್ ಪರ್ವತ
- ಕಿಲಿಮಾಂಜರೋ ಪರ್ವತ



Scanned with OKEN Scanner

- ಆಫ್ರಿಕ ಖಂಡದ ಅತ್ಯಂತ ಎತ್ತರವಾದ ಶಿಖರ - ಕಿಲಿಮಾಂಜರೋ ಪರ್ವತ

ಸೂಯೇಜ್ ಭೂಕಂಠವು ಇವುಗಳನ್ನು ಸಂಪರ್ಕಿಸುತ್ತದೆ

- ಮೆಡಿಟೇರಿಯನ್ ಸಮುದ್ರ ಮತ್ತು ಕೆಂಪು ಸಮುದ್ರ

ಅದು ಆಫ್ರಿಕ ಮತ್ತು ಏಷ್ಯ ಖಂಡಗಳನ್ನು ಸೇರುವಂತಾದ್ದು

ಆಫ್ರಿಕ ಖಂಡದ 4 ಪ್ರಮುಖ ನದಿಗಳು

- ನೈಲ್
- ಕಾಂಗೊ ( ಜೈರೆ )
- ನೈಜರ್
- ಜಾಂಬೆಜಿ

ಆಫ್ರಿಕಾದ ಇತರ ಮಹತ್ವದ ನದಿಗಳೆಂದರೆ

- ಸೆನೆಗಲ್
- ಆರೆಂಜ್
- ಲಿಂಪೋಪೋಗ

ಜಗತ್ತಿನ ಅತಿ ಉದ್ದವಾದ ನದಿ ಯಾವುದು - ನೈಲ್ ನದಿ

ವಿಕ್ಟೋರಿಯಾ ಸರೋವರವು ಆಫ್ರಿಕದ ಬಹು ದೊಡ್ಡ ಸರೋವರವಾಗಿದೆ.



Scanned with OKEN Scanner

Navachethana education YouTube & telegram channel Copy Right Reserved

- ವಿಕ್ಟೋರಿಯ ಸರೋವರದಲ್ಲಿ ನೈಲ್ ನದಿಯಾಗಿ ಉಗಮಗೊಂಡು ಸಹರಾ ಮರುಭೂಮಿಯಗುಂಟ ಉತ್ತರಾಭಿಮುಖವಾಗಿ ಹರಿದು ಮೆಡಿಟರೇನಿಯನ್ ಸಮುದ್ರದಲ್ಲಿ ಸಂಗಮಗೊಳ್ಳುತ್ತದೆ.
    - ನೈಲ್ ನದಿಯು ಪ್ರಪಂಚದಲ್ಲೆ ಪ್ರಸಿದ್ಧ ಮುಖಜ ಭೂಮಿಯನ್ನು ನಿರ್ಮಿಸಿದೆ
    - ಈ ನದಿಗೆ ನಿರ್ಮಿಸಿರುವ ಅಣೆಕಟ್ಟುಗಳಲ್ಲಿ ಅಸ್ವಾನ್ ಅಣೆಕಟ್ಟೆ ದೊಡ್ಡದು

◈ ಆಫ್ರಿಕದ ಎರಡನೆಯ ಉದ್ದವಾದ ನದಿ - ಕಾಂಗೋ ನದಿ

ಈ ನದಿಯನ್ನು ಲುಆಪುಲಾ ಎಂದು ಮತ್ತು ಉಳಿದ ಎಲ್ಲ ಕಡೆಗೆ ಲುಆಲಾಬ ಎಂದು ಕರೆಯುತ್ತಾರೆ.

- ಲಿವಿಂಗ್ ಸ್ಟನ್ ಜಲಪಾತವು ಯಾವ ನದಿಯಿಂದ ನಿರ್ಮಿತವಾಗಿದೆ

- ಕಾಂಗೋ ನದಿ

### ನೈಜರ್ ನದಿ

- ಆಫ್ರಿಕಾದ ಮೂರನೇ ಉದ್ದವಾದ ನದಿ
- ಇದು ವರ್ಷವಿಡಿ ತುಂಬಿ ಹರಿಯುವ ನದಿಯಲ್ಲ

### ಜಾಂಬೆಜಿ ನದಿ

- ಆಫ್ರಿಕದ ನಾಲ್ಕನೆಯ ಪ್ರಮುಖ ನದಿ. ಇದು ಆಫ್ರಿಕದ ದಕ್ಷಿಣ ಭಾಗದ ಮಹತ್ವದ ನದಿಯಾಗಿದೆ.
- ವಿಕ್ಟೋರಿಯ ಜಲಪಾತ. ಈ ನದಿಯು ಹಲವು ಆಳವಾದ ಕಂದರಗಳ ಮುಖಾಂತರ ಹರಿಯುತ್ತದೆ. ಅವುಗಳಲ್ಲಿ ಕರಿಬ ಕಂದರ ಪ್ರಸಿದ್ಧವಾದುದು



Scanned with OKEN Scanner

◈ ವಿಕ್ಟೋರಿಯ ಜಲಪಾತವು ಯಾವ ನದಿಯಿಂದ ನಿರ್ಮಿತವಾಗಿದೆ

- ಜಾಂಬೆಜಿ ನದಿ

◈ ಇದು ಗಿನಿಯ ಘಾಟಾ ಜಾಲ್ಲೋನ್ ಪ್ರಸ್ತಭೂಮಿಯಲ್ಲಿ ಉಗಮ ಹೊಂದುತ್ತದೆ

- ಸೆನೆಗಲ್ ನದಿ (GPSTR ಇಲಾಖೆ ಮಾದರಿ 2022)

◈ ಆಫ್ರಿಕಾ ಖಂಡದ ಅತ್ಯಂತ ತೇವದ ಪ್ರದೇಶ ಯಾವುದು

- ಕ್ಯಾಮರೂನ್

🔰 1016 ಸೆಂ. ಮೀ ವಾರ್ಷಿಕ ಸರಾಸರಿ ಮಳೆಯನ್ನು ಪಡೆಯುತ್ತದೆ

◈ ಆಫ್ರಿಕಾದ ಈ ಪ್ರದೇಶದ ವಾಯುಗುಣ ವರ್ಷವಲ್ಲಾ ಅತಿಶಾಖ ಮತ್ತು ಮಳೆಯಿಂದ ಕೂಡಿರುತ್ತದೆ - ಸಮಭಾಜಕ ವೃತ್ತದ ತೇವು ಪ್ರದೇಶ

◈ ಯಾವ ಪ್ರದೇಶವನ್ನು ಸುಡಾನ್ ಮಾದರಿ ವಾಯುಗುಣ ಎಂತಲೂ ಕರೆಯುವರು

- ಸವನ್ನ ಮಾದರಿ ವಾಯುಗುಣ ಪ್ರದೇಶ

◈ ಆಫ್ರಿಕದ ಯಾವ ಪ್ರದೇಶ ಬೇಸಿಗೆ ಮತ್ತು ಚಳಿಗಾಲಗಳಿಗಿಂತಲೂ ಹಗಲು ಮತ್ತು ರಾತ್ರಿಗಳ ಉಷ್ಣಾಂಶದ ಹಂಚಿಕೆಯಲ್ಲಿ ಹೆಚ್ಚು ವ್ಯತ್ಯಾಸವಿರುತ್ತದೆ

- ಉಷ್ಣವಲಯದ ಮರುಭೂಮಿ ಪ್ರದೇಶ

6ನೇ ತರಗತಿಯ ಸಮಾಜ ವಿಜ್ಞಾನ (ಭೂಗೋಳ ) ಪರಿಷ್ಕೃತ ಮುದ್ರಣ 2022



Scanned with OKEN Scanner

Navachethana education YouTube & telegram channel Copy Right Reserved

❖ ಚಳಿಗಾಲದಲ್ಲಿ ಮಳೆ ಪಡೆಯುವ ಆಫ್ರಿಕದ ವಾಯುಗುಣ ಪ್ರದೇಶ ಯಾವುದು -

ಮೆಡಿಟರೇಯನ್ ವಾಯುಗುಣ ಪ್ರದೇಶ

❖ ಸಮಶೀತೋಷ್ಣವಲಯದ ಹುಲ್ಲುಗಾವಲು ಪ್ರದೇಶವನ್ನು ಆಫ್ರಿಕದಲ್ಲಿ ಹೀಗೆನ್ನುವರು - ವೆಲ್ಡ್

GPSTR 2015

ವೆಲ್ಡ್ (Veldts) ಎಂದರೆ 'ಕ್ಷೇತ್ರ' ಎಂದರ್ಥ

❖ ಆಫ್ರಿಕಾದ ಯಾವ ಪ್ರದೇಶವು ಡ್ರೇಕನ್ಸ್ ಬರ್ಗ್ ಪರ್ವತ ಭಾಗಗಳು ಹಾಗೂ ಮಡಗಾಸ್ಕರ್ ದ್ವೀಪವನ್ನೂ ಒಳಗೊಂಡಂತೆ ಪೂರ್ವ ಕರಾವಳಿವರೆಗೂ ವಿಸ್ತರಿಸಿದೆ

- ಆರ್ದ್ರ-ಉಪಉಷ್ಣವಲಯದ ವಾಯುಗುಣ ಪ್ರದೇಶ

❖ ಆಫ್ರಿಕದ ಮರುಭೂಮಿ ಹಡಗು -ಒಂಟೆ

❖ ಉಷ್ಟ್ರಪಕ್ಷಿಯು ಆಫ್ರಿಕಾದ ಯಾವ ಪ್ರದೇಶದಲ್ಲಿ ಕಂಡು ಬರುತ್ತದೆ

- ಕಲಹರಿ ಮರುಭೂಮಿ

❖ ಆಫ್ರಿಕದ ಯಾವ ಪ್ರದೇಶದಲ್ಲಿ ಸಾವಿರಾರು ವರ್ಷಗಳಿಂದ ಕಾಫಿಯನ್ನು ಬೆಳೆಯುತ್ತಾ ಬಂದಿದ್ದಾರೆ - ಇಥಿಯೋಪಿಯಾ

❖ ಪ್ರಪಂಚದ ಒಟ್ಟು ವಜ್ರ ನಿಕ್ಷೇಪದಲ್ಲಿ ಶೇಕಡಾ ರಷ್ಟು ಭಾಗ ಆಫ್ರಿಕಾ ಒಂದರಲ್ಲಿ ಕಂಡುಬರುತ್ತದೆ - ಶೇ 80 ಭಾಗ

❖ ಲಿಬಿಯಾದ ಇಲ್ ಅಜಿಜಿಯಾದಲ್ಲಿ ಪ್ರಪಂಚದಲ್ಲೇ ಅತಿಹೆಚ್ಚು ಉಷ್ಣಾಂಶ 50° ಸೆಲ್ಸಿಯಸ್ ದಾಖಲಾಗುತ್ತದೆ

6ನೇ ತರಗತಿಯ ಸಮಾಜ ವಿಜ್ಞಾನ (ಭೂಗೋಳ ) ಪರಿಷ್ಕೃತ ಮುದ್ರಣ 2022



Scanned with OKEN Scanner

Navachethana education YouTube & telegram channel Copy Right Reserved

❖ ಪ್ರಪಂಚದ ಶೇ.50 ಭಾಗಕ್ಕೂ ಹೆಚ್ಚು ಕೋಕೋ ವನ್ನು ಆಫ್ರಿಕ ಒಂದೇ ಉತ್ಪಾದಿಸುತ್ತದೆ.

❖ ಪಿಗ್ಮಿಗಳು ಪ್ರಪಂಚದಲ್ಲಿಯೇ ಅತಿ ಗಿಡ್ಡ ಜನರಾಗಿದ್ದಾರೆ. ಅವರು ಕಾಂಗೋ ಕಣಿವೆಯಲ್ಲಿ ವಾಸಿಸುತ್ತಾರೆ.

❖ ಅತಿ ಕಡಿಮೆ ನಗರೀಕರಣವುಳ್ಳ ಖಂಡ - ಆಫ್ರಿಕ



Scanned with OKEN Scanner

Navachethana education YouTube & telegram channel Copy Rights Reserved

# ಉತ್ತರ ಭಾರತದ ಕೆಲವು ರಾಜವಂಶಗಳು

## ❖ಕಾಶ್ಮೀರದ ಕಾರ್ಕೋಟ ಸಾಮ್ರಾಜ್ಯ

NAVACHETANA EDUCATIONS
7019752139

1.ವಿಶ್ವವೇ ಬೆರಗಾಗುವಂತೆ ಆಡಳಿತವನ್ನು ನಡೆಸಿದ, ಮಾದರಿ ರಾಜ್ಯವನ್ನು ಕಟ್ಟಿದ ಮತ್ತು ಅಸಾಧ್ಯವಾದುದನ್ನು ಸಾಧಿಸಿದ ಉತ್ತರ ಭಾರತದ ರಾಜ ವಂಶ ಯಾವುದು

- ಕಾಶ್ಮೀರದ ಕಾರ್ಕೋಟ ವಂಶಸ್ಥರು

2. ಕಾಶ್ಮೀರದ ಕಾರ್ಕೋಟ ಮನೆತನ ಸ್ಥಾಪಕ - ರಾಜಾ ದುರ್ಲಭವರ್ಧನ

3. ಕಾಶ್ಮೀರದ ಕಾರ್ಕೋಟ ಸಾಮ್ರಾಜ್ಯ ರಾಜಧಾನಿ ಯಾವುದು - ಪಾರಸ್ಪೋರ್ ಅಥವಾ ಪರಿಹಾಸಪುರ

4. ಕಾರ್ಕೋಟ ಸಾಮ್ರಾಜ್ಯ ಕಾಶ್ಮೀರದ ಗತವೈಭವವನ್ನು ಸಾರುವ ಹೆಸರಾಂತ ದೇವಸ್ಥಾನ ಹೆಸರು - ಮಾರ್ತಾಂಡ ಸೂರ್ಯ ದೇವಸ್ಥಾನ

5. ಕಾರ್ಕೋಟ ರಾಜವಂಶದ ಪ್ರಭಾವಿ ದೊರೆ ಯಾರು - ಲಲಿತಾದಿತ್ಯ

6.ಕಾರ್ಕೋಟ ವಂಶದಲ್ಲಿ ಗಮನ ಸೆಳೆಯುವ ಮತ್ತು ಅತ್ಯಂತ ಪ್ರಭಾವಿ ರಾಜನಾಗಿದ್ದವನೆಂದರೆ ಲಲಿತಾದಿತ್ಯ ಆತನು ಎಷ್ಟು ವರ್ಷಗಳ ಆಳ್ವಿಕೆ ನಡೆಸಿದನು - 36 ವರ್ಷಗಳ ಆಳ್ವಿಕೆ ನಡೆಸಿದನು

7.ಈತನ ಕಾಲವನ್ನು ಕಾರ್ಕೋಟ ವಂಶದ ಚಿನ್ನದ ಯುಗ ವೆಂದು ಕರೆಯುವರು

- ಲಲಿತಾದಿತ್ಯ



Scanned with OKEN Scanner

Navachethana education YouTube & telegram channel Copy Rights Reserved

8.ಕಾಶ್ಮೀರದ ಶೈವಸಿದ್ಧಾಂತದ ಅತ್ಯಂತ ವೈಭವದ ಕಾಲಘಟ್ಟವೆಂದು ಕಾರ್ಕೋಟರ ಕಾಲವನ್ನು ಹೇಳಲಾಗುತ್ತದೆ. ಯಾವ ಸೂತ್ರ ಈ ಅವಧಿಯಲ್ಲಿ ರಚನೆಯಾಯಿತು - ವಸುಗುಪ್ತನ ಶೈವಸೂತ್ರ

9. ಕಾರ್ಕೋಟ ಸಾಮ್ರಾಜ್ಯ ಖ್ಯಾತ ತತ್ವಶಾಸ್ತ್ರಜ್ಞ ಕವಿ - ಅಭಿನವಗುಪ್ತ

10. ಹೆಸರಾಂತ ಕವಿಯಾದ ಕಲ್ಹಣನು ಯಾರ ಆಸ್ಥಾನದಲ್ಲಿದ್ದನು - ಲಲಿತಾಧಿತ್ಯ

11. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿ

A. ರಜಪೂತರು ಸಾಹಸಿ, ಪರಾಕ್ರಮಗಳಿಗೆ ಹೆಸರಾದವರು. ಅವರು ತಮನ್ನು ಕ್ಷತ್ರಿಯರು, ತಮ್ಮದು ಸೂರ್ಯವಂಶ ಮತ್ತು ಚಂದ್ರವಂಶ' ಎಂದು ಗುರುತಿಸಿಕೊಳ್ಳುತ್ತಾರೆ ☑

B. ರಜಪೂತ ವಂಶಗಳು ಉತ್ತರ ಭಾರತದಲ್ಲಿ ಸುಮಾರು 500 ವರ್ಷಗಳ ಕಾಲ ಆಳ್ವಿಕೆ ನಡೆಸಿದವು. ಅದೊಂದು ಭವ್ಯವಾದ, ಕಾಲವಾಗಿತ್ತು. ☑

C. ಆಕ್ರಮಣಕಾರರಾಗಿ ಭಾರತಕ್ಕೆ ಬಂದಿದ್ದ ಅರಬ್ಬರು, ಟರ್ಕರು, ಅಫ್‌ಘನರು ಮತ್ತು ಮೊಗಲರನ್ನು ಎದುರಿಸಿ, ಅವರೊಡನೆ ದಿಟ್ಟತನದಿಂದ ಹೋರಾಡಿದವರು ಇವರೇ ☑

ಮೇಲಿನ ಎಲ್ಲ ಹೇಳಿಕೆಗಳು ಸರಿ ಇದೆ

12. ಅವಮಾನಕ್ಕಿಂತ ಸಾವೇ ಲೇಸೆಂದು ಪರಿಗಣಿಸಿ 'ಜೋಹರ್' ಆಚರಿಸುತ್ತಿದ್ದ ಸ್ತ್ರೀಯರು ಯಾರು - ರಜಪೂತ ಸ್ತ್ರೀಯರು



Scanned with OKEN Scanner

Navachethana education YouTube & telegram channel Copy Rights Reserved

13. ರಜಪೂತ ಸ್ತ್ರೀಯರು ಅನುಸರಿಸುತ್ತಿದ್ದ ಸಾಮೂಹಿಕ ಆತ್ಮಾರ್ಪಣೆ ಪದ್ಧತಿ ಯಾವುದು-

ಜೋಹರ್ ಪದ್ಧತಿ

14. ಹೊಂದಿಸಿ ಬರೆಯಿರಿ

1. ದಿಲ್ ವಾರಾ - ಅಮೃತ ಶಿಲಾಮಂದಿ
2. ಕೋನಾರ್ಕ್ - ಸೂರ್ಯ ಮಂದಿರ
3. ಭುವನೇಶ್ವರ - ಲಿಂಗರಾಜ ದೇವಾಲಯ
4. ಗಾಲ್ವಿಯರ್ - ಗಾಲ್ವಿಯರ್ ಕೋಟೆ

ಭಾರತದ ಯಾವ ಕೋಟೆಗಳ ಕೊರಳ ಹಾರದ ಮುತ್ತು ಎಂದು ಕರೆಯಲಾಗಿದೆ

- ಗಾಲ್ವಿಯರ್ ಕೋಟೆ

15. ರಜಪೂತರು ಭಿತ್ತಿ ಮತ್ತು ಚಿಕಿಣಿ ವರ್ಣಚಿತ್ರಗಳನ್ನು ಪ್ರೋತ್ಸಾಹಿಸಿದರು.

(ಚಿಕಿಣಿ ಚಿತ್ರವೆಂದರೆ ನಾಜೂಕಾಗಿ ಚಿತ್ರಿಸಿದ ಕಿರುಚಿತ್ರ)

16. ಚಾಂದ್ ಬರ್ದಾಯಿಯ 'ಪೃಥ್ವಿರಾಜ ರಾಸೊ' ಈ ಕಾಲದ ಪಸಿದ್ಧ ಹಿಂದಿ ಕೃತಿ

17. 'ಗೀತಗೋವಿಂದ' ಬರೆದ ಜಯದೇವ ಕವಿ ಸೇನರ ಆಸ್ಥಾನದಲ್ಲಿದ್ದನು,

18. ರಜಪೂತ ಕಾಲದ ಪ್ರಾಚೀನ ವಿದ್ಯಾ ಕೇಂದ್ರಗಳು - ನಲಂದಾ, ಕಾಶಿ, ವಿಕ್ರಮಶೀಲ, ಉಜ್ಜಯಿನಿ,

19. ಗುರ್ಜರ ಪ್ರತಿಹಾರರು ಈ ವಂಶದ ಪ್ರಸಿದ್ಧ ರಾಜ - ನಾಗಭಟ



Scanned with OKEN Scanner

Navachethana education YouTube & telegram channel Copy Rights Reserved

20. ಇವನ ರಾಜ್ಯವನ್ನು ಸಂದರ್ಶಿಸಿ ಅರಬ್ ಪ್ರವಾಸಿ ಸುಲೇಮಾನ್, "ಈತನು ಧನವಂತ ದೊರೆ, ಅರಬ್ಬರ ಶತ್ರು ಒಳ್ಳೆಯ ಅಶ್ವದಳ ಉಳ್ಳವನು" ಎಂದಿದ್ದಾನೆ.

- ಭೋಜ ರಾಜ

21. ಧರ್ಮ ಪಾಲನು ಪಾಲ ವಂಶದ ಶ್ರೇಷ್ಠ ದೊರೆ

22. ಚೌಹಾಣರಲ್ಲಿ ಮೂರನೇ ಪೃಥ್ವಿರಾಜನು ಪ್ರಸಿದ್ಧ ಅರಸು, ದಿಲ್ಲಿ ಅವನ ರಾಜಧಾನಿ

23. ಕರ್ನಾಟಕ ಮೂಲದ ವಿಜಯಸೇನನೆಂಬ ದೊರೆ ಪಾಲರ ಆಡಳಿತವನ್ನು ಕೊನೆಗಾಣಿಸಿ ಸೇನವಂಶದ ಆಳ್ವಿಕೆಯನ್ನು ಆರಂಭಿಸಿದ.

24. ಪೃಥ್ವಿರಾಜ ಚೌಹಾಣನ ಪತ್ನಿ (ರಾಣಿ) ಯಾರು - ಸಂಯುಕ್ತೆ

25. ಪ್ರಥಮ ತರೈನ್ (ಸಾ. ಶ 1191 )ಯುದ್ಧದಲ್ಲಿ ಸೋತವರು ಯಾರು?

- ಘೋರ್, ಪಾಂತ್ಯದ ಮಹಮ್ಮದ್ ಘೋರಿ

26. 2ನೇ ತರೈನ್ ಯುದ್ಧ (ಸಾ .ಶ. 1192)ದಲ್ಲಿ ಪೃಥ್ವಿರಾಜನನ್ನು ಸೋಲಿಸಿದವರು ಯಾರು -

- ಮಹಮ್ಮದ್ ಘೋರಿ

27. ರಜಪೂತರಲ್ಲಿ ಗುಹಿಲರು (ಗುಹಿಲೋಟರು) ವೀರಪರಂಪರೆಯ ವಂಶದವರು. ಈ ವಂಶದ ದೊರೆ - ಖೊಮ್ಮಾಣ

28. ಅರಬ್ಬರ ದಾಳಿಯಿಂದ ತನ್ನ ರಾಜ್ಯವನ್ನು ರಕ್ಷಿಸಿ ಬಪ್ಪಾರಾವಲ್ ಎಂಬ ಬಿರುದು ಧರಿಸಿದ ದೊರೆ - ಖೊಮ್ಮಾಣ



Scanned with OKEN Scanner

Navachethana education YouTube & telegram channel Copy Rights Reserved

29. ಗುಹಿಲರಲ್ಲಿ ಯಾರು ರಾಜ್ಯದ ಭದ್ರತೆಗಾಗಿ 32 ಕೋಟೆಗಳನ್ನು ಕಟ್ಟಿಸಿದನು.

- ರಾಣಾ ಕುಂಭ

30.. ಚಿತ್ತೋಡ ನಡೆದ ಪ್ರಖ್ಯಾತ ವಿಜಯಸ್ತಂಭ ಇವರ ಕಾಲದಲ್ಲಿ ನಿರ್ಮಾಣವಾಯಿತು

- ಗುಹಿಲರು TET 2020

## ಅಹೋಮ್ ರಾಜವಂಶ

1.ಅಹೋಮ್ ರಾಜವಂಶವು ಎಷ್ಟು ವರ್ಷಗಳ ಕಾಲ ಆಳ್ವಿಕೆ ನಡೆಸಿತ್ತು

- 598 ವರ್ಷಗಳ ಕಾಲ

2. ಅಹೋಮ್ ರಾಜವಂಶದ ಸ್ಥಾಪಕ ಯಾರು - ಷಾನ್ ರಾಜಕುಮಾರ ಸುಕಾಪಾ

3.ಈತನ ವಂಶಜರು ಪಟ್‌ಕಾಯ್ ಬೆಟ್ಟಗಳನ್ನು ದಾಟಿ ಅಸ್ಸಾಂ ಭಾಗದಲ್ಲಿ ಬಂದು ನೆಲೆಸಿದರು.

4.ಅಹೋಮ್ ರಾಜವಂಶದಲ್ಲಿ ರಾಜನನ್ನು ಏನೆಂದು ಕರೆಯುತ್ತಿದ್ದರು

- ಆಸಾಮ್ ರಾಜ

5.ಅಹೋಮ್ ರಾಜವಂಶದಲ್ಲಿ ಪ್ರಜೆಗಳನ್ನು ಏನೆಂದು ಕರೆಯುತ್ತಿದ್ದರು

- ಕವೋಫ

6. ಅಹೋಮ್ ಮನೆತನದಲ್ಲಿ ರಾಜನನ್ನು ಯಾರ ಒಪ್ಪಿಗೆಯಿಂದ ನೇಮಕ ಮಾಡುತ್ತಿದ್ದರು

- ಪತ್ರ ಮಂತ್ರಿಗಳ ಒಪ್ಪಿಗೆಯಿಂದ



Scanned with OKEN Scanner

Navachethana education YouTube & telegram channel Copy Rights Reserved

7.ಅಹೋಮ್ ವಂಶದ ಸುಕಾಪಾ ರಾಜನು ಯಾವ ವಂಶಕ್ಕೆ ಸೇರಿದವನು

- ಕುನ್ಸುಂಗ್

8. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿ

A. ಅಹೋಮ್ ರಾಜರನ್ನು ದೈವದತ್ತರೆಂದು ಭಾವಿಸಲಾಗಿತ್ತು. ☑

B. ಅಹೋಮ್ ವಂಶದ ಸುಕಾಪಾ ರಾಜನು ಕುನ್ಸುಂಗ್ ವಂಶಕ್ಕೆ ಸೇರಿದವನು ☑

C. ಸ್ವರ್ಗದ ರಾಜನಾದ ಲ್ಯೂಂಗಡಾನ್ ನ ಮೊಮ್ಮಗನಾದ ಈತನು ಮಾಂಗ್ರಿಮಾಂಗ್ರಾಮ್ ನ್ನು ಆಳಲು ಭೂಮಿಗೆ ಬಂದನು ☑

D. ಅವರನ್ನು ಇಂದ್ರ ವಂಶ ಕ್ಷತ್ರಿಯರೆಂದು ಕರೆಯಲಾಗಿತ್ತು ☑

- ಮೇಲಿನ ಎಲ್ಲ ಹೇಳಿಕೆಗಳು ಸರಿ

9. ಅಹೋಮ್ ವಂಶದ ಯಾವ ರಾಜನಿಗೆ ಸುವರ್ಣ ನಾರಾಯಣ ಎಂಬ ಬಿರುದಿತ್ತು

- ಸುಹುಂಗಮುಂಗ್

10. "ಶ್ರೀ ಸ್ವರ್ಗನಾರಾಯಣ ಮಹಾರಾಜೋರ್ ಜೋನ್ಮಕೊಥೊ " ಎಂದು ಯಾವ ಮಹಾಕಾವ್ಯದಲ್ಲಿ ಹೇಳಲಾಗಿದೆ - ಬುರುಂಜಿ ಮಹಾಕಾವ್ಯ

◈ ಕಾವ್ಯ ಭಾಗದಲ್ಲಿ ಅಹೋಮ್ ರಾಜರು ಹಿಂದೂ ದೇವರ ವಂಶಸ್ಥರೆಂದು ಗುರುತಿಸಲಾಗಿದೆ

11.ಸಿಂಹಾಸನ ಏರಿದ ನಂತರ ರಾಜನು ಅಹೋಮ್ ಹೆಸರನ್ನು ಪಡೆಯಲು

ಅಹೋಮ್ ಪುರೋಹಿತರು ನಿರ್ಧರಿಸುತ್ತಿದ್ದರು



Scanned with OKEN Scanner

Navachethana education YouTube & telegram channel Copy Rights Reserved

12. ಭಿತರೂಲ್ ಫುಕನ್ ಎಂದರೆ - ಅಹೋಮ್ ಸೈನ್ಯಪಡೆ

ಅಹೋಮ್ ಆಳ್ವಿಕೆಯ 600 ವರ್ಷಗಳ ಅವಧಿಯಲ್ಲಿ ಮೂವರನ್ನು ಪ್ರಮುಖವಾಗಿ ಗುರುತಿಸಲಾಗಿದೆ.

- ಸುರಾಪಾ - ಆಹೋಮ್ ರಾಜ್ಯಸ್ಥಾಪಕ,
- ಸುಹುಂಗ್ ಮುಂಗ್ - ರಾಜ್ಯ ವಿಸ್ತರಣೆ ಮಾಡಿದವನು
- ಸುಪಾತ್ಫಾ - ರಾಜ್ಯವನ್ನು ಉನ್ನತ ಸ್ಥಿತಿಗೆ ತಂದವನು.
- ಅಹೋಮ್ ಸಾಮ್ರಾಜ್ಯದ ಪ್ರಸಿದ್ಧ ಸೇನಾಪತಿಯಾಗಿದ್ದ ಲಸಿತ್ ಬೋರ್ಫುಕಾನ್ ಮಹಾಪರಾಕ್ರಮಿ ಎಂದು ಹೆಸರಾಗಿದ್ದಾನೆ

13. ಕೆಳಗಿನ ಹೇಳಿಕೆಯನ್ನು ಗಮನಿಸಿ ಮತ್ತು ಸರಿಯಾದ ಆಯ್ಕೆಯನ್ನು ಗುರುತಿಸಿ

A. ಅಹೋಮ್ ರಾಜರಂತೆ, ಅವರ ರಾಣಿಯರೂ ಕೂಡ ರಾಜ್ಯಭಾರದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ☑

B. ಮಹಾರಾಣಿಗೆ ಬೋರ್ ಕುವರಿ, ಇತರ ರಾಣಿಯರಿಗೆ ಪಾರ್ವತಿಯಾ ಕುವರಿ, ರಾಜವಂಗಿಯ ಕುವರಿ, ತಮುಲಿ ಕುವರಿ ಎನ್ನುತ್ತಿದ್ದರು. ☑

C. ಸಾಮಾನ್ಯವಾಗಿ ರಾಣಿಯರು ಅಹೋಮ್ ಕುಲೀನ ಮನೆತನದವರಾಗಿರುತ್ತಿದ್ದರು. ☑

D. ರಾಜನ ಮರಣದ ನಂತರವೂ ರಾಣಿಯರು ರಾಜ್ಯಭಾರದ ಹೊಣೆ ತಾವೇ ಹೊರುತ್ತಿದ್ದರು. ನಾಣ್ಯಗಳ ಎರಡು ಮುಖಗಳಲ್ಲಿ ಕ್ರಮವಾಗಿ ರಾಜ ಹಾಗೂ ರಾಣಿಯರ ಹೆಸರನ್ನು ಮುದ್ರಿಸುತ್ತಿದ್ದರು. ☑



Scanned with OKEN Scanner

Navachethana education YouTube & telegram channel Copy Rights Reserved

- ಮೇಲಿನ ಎಲ್ಲ ಹೇಳಿಕೆಗಳು ಸರಿ ಇದೆ

14. ಮೊಘಲರು 1615ರಿಂದ 1682ರವರೆಗೆ 17 ಬಾರಿ ಆಹೋಮ್ ರಾಜ್ಯದ ಮೇಲೆ ದಾಳಿ ಮಾಡಿದರು.

15. ರಾಜ ಚಕ್ರಧ್ವಜ ಸಿಂಘನು ಯಾರ ನಾಯಕತ್ವದಲ್ಲಿ ಮೊಘಲರ ಮೇಲೆ ಆಕ್ರಮಣ ಮಾಡಿ ಸೋಲಿಸಿದನು - ಲಸಿತ್ ಬೋರ್ಫುಕಾನ್

## ದಿಲ್ಲಿಯ ಸುಲ್ತಾನರು

1.ಭಾರತದ ಮೇಲೆ ದಾಳಿ ಮಾಡಿದ ಮೊದಲಿಗರು ಯಾರು - ಅರಬ್ಬರು

2.ಅರಬ್ಬ ದಂಡು ಯಾವ ವರ್ಷದಲ್ಲಿ ಸಿಂಧ್ ಮತ್ತು ಮುಲ್ತಾನ್ ಪ್ರಾಂತ್ಯಗಳನ್ನು ವಶಪಡಿಸಿಕೊಂಡಿತು - ಸಾ. ಶ 712 ರಲ್ಲಿ

3.17 ಬಾರಿ ಭಾರತದ ಮೇಲೆ ದಾಳಿ ಮಾಡಿದವನು ಯಾರು

- ಮಹಮದ್ ಘಜನಿ

4.12ನೆಯ ಶತಮಾನದ ಕೊನೆಯ ಭಾಗದಲ್ಲಿ ಅಫ್ಘಾನಿಸ್ತಾನದ ಮಹಮದ್ ಘೋರಿ ಭಾರತದ ಮೇಲೆ ದಾಳಿ ನಡೆಸಿ ಯಾವ ಪ್ರದೇಶವನ್ನು ವಶಪಡಿಸಿಕೊಂಡನು - ಸಿಂಧ್ & ಪಂಜಾಬ್



Scanned with OKEN Scanner

Navachethana education YouTube & telegram channel Copy Rights Reserved

5.ಮಹಮ್ಮದ್ ಘೋರಿ ಗೆದ್ದುಕೊಂಡ ಪ್ರದೇಶಗಳನ್ನು ಯಾರಿಗೆ ಹಸ್ತಾಂತರಿಸಿದನು –

ತನ್ನ ಸೇನಾನಿ ಕುತ್ಬುದ್ದೀನ್ ಐಬಕ್

6.'ಕುತುಬ್ ಮಿನಾರ್'ನ ನಿರ್ಮಾಣ ಕಾರ್ಯವನ್ನು ಆರಂಭಿಸಿದವನು ಯಾರು-

ಕುತ್ಬುದ್ದೀನ್ ಐಬಕ್

7.'ಕುತುಬ್ ಮಿನಾರ್'ನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದವನು ಯಾರು -

ಇಲ್ತಮಶ್

8. ದೆಹಲಿ ಸುಲ್ತಾನ ಸಿಂಹಾಸನವನ್ನೇರಿದ ಮೊದಲ ಮತ್ತು ಏಕೈಕ ಮುಸ್ಲಿಂ ಮಹಿಳೆ ಯಾರು -

ಸುಲ್ತಾನಾ ರಜಿಯಾ

9.ಅಲ್ಲಾವುದ್ದೀನ್ ಖಿಲ್ಜಿಗೆ ಅತಿ ಹೆಚ್ಚು ಖ್ಯಾತಿಯನ್ನು ತಂದುಕೊಟ್ಟ ಆತನ ಆಡಳಿತ ಸುಧಾಣೆಗೆ ಯಾವುದು? - ಮಾರುಕಟ್ಟೆ ಸುಧಾರಣೆ ( ಬೆಲೆ ನಿಯಂತ್ರಣ

10. ದೆಹಲಿಯಲ್ಲಿ ಮದ್ಯಪಾನವನ್ನು ನಿಷೇಧಿಸಿದ ಸುಲ್ತಾನ ಯಾರು

- ಅಲ್ಲಾವುದ್ದೀನ್ ಖಿಲ್ಜಿ

11. ದಕ್ಷಿಣ ಭಾರತದ ತಂಡ ಯಾತ್ರೆಗೆ ಅಲ್ಲಾವುದ್ದೀನ್ ಖಿಲ್ಜಿ ನಿಂದ ನಿಯುಕ್ತಿಗೊಂಡ ಸೇನಾನಿ

- ಮಲ್ಲಿಕ್ ಕಾಫರ್

12 ಅಲ್ಲಾವುದ್ದೀನ್ ಖಿಲ್ಜಿಯ ಕಾಲದಲ್ಲಿ ತನ್ನ ಆಸ್ಥಾನದಲ್ಲಿದ್ದ ಇಬ್ಬರು ಕವಿಗಳು ಯಾರು -

ಅಮೀರ್ ಖುಸ್ರು & ಅಮೀರ್ ಹಸನ್

13. ದೆಹಲಿಯಲ್ಲಿ ಸಿರಿ ಕೋಟೆಯನ್ನು ಕಟ್ಟಿಸಿದವನು - ಅಲ್ಲಾವುದ್ದೀನ್ ಖಿಲ್ಜಿ



Scanned with OKEN Scanner

Navachethana education YouTube & telegram channel Copy Rights Reserved

14.ಅಲೈ ದರ್ವಾಜಾ ಇವನ ಭವ್ಯ ರಚನೆ - ಅಲ್ಲಾವುದ್ದೀನ್ ಖಿಲ್ಜಿ

15. ತುಘಲಖ್ ಸಂತತಿಯ ಪ್ರಸಿದ್ಧ ಸುಲ್ತಾನ ಯಾರು

- ಮಹಮದ್ ಬಿನ್ ತುಘಲಖ್

16. ದೆಹಲಿ ಸುಲ್ತಾನ ಮಹಮದ್ ಬಿನ್ ತುಘಲಖ್ ಆಡಳಿತ ಸುಧಾರಣೆಗಳಲ್ಲೇ ಅತ್ಯಂತ ಪ್ರಮುಖವಾದುದು ಯಾವುದು - ರಾಜಧಾನಿ ಬದಲಾವಣೆ

17. ರಾಜಧಾನಿಯನ್ನು ದೆಹಲಿಯಿಂದ ದೇವಗಿರಿಗೆ (ದೌಲತಾಬಾದ್) ಬದಲಾಯಿಸಿದ ದೆಹಲಿ ಸುಲ್ತಾನ ಯಾರು - ಮಹಮದ್ ಬಿನ್ ತುಘಲಖ್

18. ಮಹಮದ್ ಬಿನ್ ತುಘಲಖ್ ಆಡಳತ ಪ್ರಯೋಗವೆಂದರೆ ಬೆಳ್ಳಿಯ ನಾಣ್ಯಗಳ ಬದಲು ಅಷ್ಟೇ ಮುಖಮೌಲ್ಯವುಳ್ಳ ತಾಮ್ರದ ನಾಣ್ಯಗಳನ್ನು ಚಲಾವಣೆಗೆ ತಂದುದು.

19. ದಿಲ್ಲಿ ಸುಲ್ತಾನರ ರಾಜ್ಯದಲ್ಲಿ ಹಿಂದುಗಳು ಬಹುಸಂಖ್ಯಾತರಾಗಿದ್ದರೂ ಆಡಳಿತವು ಟರ್ಕ್ ನೆಲೆಯಲ್ಲಿ ನಡೆಯುತ್ತಿತ್ತು, ಮಿಲಿಟರಿ ಶಕ್ತಿಯು ರಾಜ್ಯದ ಬೆನ್ನೆಲುಬಾಗಿತ್ತು.

20. "ತಾನು ಅಲ್ಲಾನ ಪ್ರತಿನಿಧಿ, ಅಲ್ಲಾನಿಗಲ್ಲದೆ ಇನ್ನಾರಿಗೂ ಹೊಣೆಗಾರನಲ್ಲ ಎಂಬುದಾಗಿ ಸಾರಿದ್ದನು" - ಬಲ್ಬನ್

21. ನೇಯ್ಗೆಯು ದೆಹಲಿ ಸುಲ್ತಾರ ಕಾಲದ ಬೃಹತ್ ಉದ್ಯಮವಾಗಿತ್ತು. TET 2019

22. ದಿಲ್ಲಿ ಸುಲ್ತಾನರ ಕಾಲದ ಪ್ರಮುಖ ವಾಸ್ತುಶಿಲ್ಪಗಳೆಂದರೆ -

- ಕುತುಬ್ ಮಿನಾರ್
- ಅಲೈ ದರ್ವಾಜಾ



Scanned with OKEN Scanner

Navachethana education YouTube & telegram channel Copy Rights Reserved

- ಕವ್ವತ್‌ವುಲ್ ಇಸ್ಲಾಮ್ ಮಸೀದಿ
- ಸಿರಿ ಕೋಟೆ

23. ದೆಹಲಿ ಸುಲ್ತಾನರ ಕಾಲದಲ್ಲಿದ್ದ ಪರ್ಷಿಯನ್ ಭಾಷೆಯ ಹೆಸರಾಂತ ಕವಿಗಳು

- ಅಮೀರ್ ಖುಸ್ರು & ಅಮೀರ್ ಹಸನ್

24. ಅಮೀರ್ ಖುಸ್ರು ಸಂಗೀತಗಾರನಾಗಿದ್ದು ತಬಲಾ, ಸಿತಾರ್ ಮುಂತಾದ ವಾದ್ಯಗಳನ್ನು ರೂಪಿಸಿದನು

25. ಜಯಸಿ ಎಂಬ ಕವಿ ಉರ್ದುವಿನಲ್ಲಿ ಪದ್ಮಾವತ್ ಸೂಫಿ ಕಾವ್ಯ ಬರೆದನು

26. ರಮಾನಂದ, ಕಬೀರ, ರಾಯಿದಾಸ, ಮೀರಾಬಾಯಿ ಈ ಕಾಲದವರು

## ಕಾಲಗಣನೆ

1. ಸಿಂಧ್ ಪ್ರಾಂತದ ಮೇಲೆ ಅರಬ್ಬರ - 712
2. ಮಹಮದ್ ಘಜನಿಯ ಆಕ್ರಮಣಗಳು - 1000-1026
3. ತರೈನ್ ಕದನಗಳು (ಮಹಮದ್ ಮತ್ತು ಪೃಥ್ವಿರಾಜ್ ಚೌಹಾಣರ (ನಡುವೆ)- 1191-1192
4. ದಿಲ್ಲಿಯ ಸುಲ್ತಾನರ ಆಳ್ವಿಕೆ - 1206-1526
5. ಕುತ್ಬುದ್ದೀನ್ ಐಬಕ್ - 1206 -1210
6. ರಜಿಯಾ ಸುಲ್ತಾನಾ - 1236-1240
7. ಅಲ್ಲಾವುದ್ದೀನ್ ಖಿಲ್ಜಿ - 1296 -1316
8. ಮಹಮದ್ ಬಿನ್ ತುಘಲಖ್ - 1325 - 1351



Scanned with OKEN Scanner

Navachethana education YouTube & telegram channel Copy Rights Reserved

9. ಪಾಣಿಪತ್ ಕದನ ಹಾಗೂ ಮೊಗಲ್ ಆಳ್ವಿಕೆಯ ಆರಂಭ - **1526**

## ಭಾರತೀಯ ವೈಚಾರಿಕತೆ ಹಾಗೂ ಭಕ್ತಿ ಪಂಥ

### ಧಾರ್ಮಿಕ - ಸಾಮಾಜಿಕ ಸುಧಾರಣಾ ಚಳುವಳಿಗಳು

1. ಶ್ರೀ ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವ - ಅದ್ವೈತ ಸಿದ್ಧಾಂತ

2. ಶ್ರೀ ಶಂಕರಾಚಾರ್ಯರ ಜನಪ್ರಿಯ ಕೃತಿ ಯಾವುದು

- ಭಜಗೋವಿಂದಂ ಸ್ತೋತ್ರ

3. ಶ್ರೀ ಶಂಕರಾಚಾರ್ಯರು ಪ್ರತಿಪಾದಿಸಿದ ತತ್ವ - ಅದ್ವೈತ ಸಿದ್ಧಾಂತ

4. ಶ್ರೀ ಶಂಕರಾಚಾರ್ಯರು ಸ್ಥಾಪಿಸಿದ ಪೀಠಗಳನ್ನು ಹೊಂದಿಸಿ ಬರೆಯಿರಿ

A. ಬದರಿ - ಉತ್ತರಾಖಂಡ

B. ದ್ವಾರಕ - ಗುಜರಾತ್

C. ಪುರಿ - ಒಡಿಶ

D. ಕರ್ನಾಟಕ - ಶೃಂಗೇರಿ

5. ರಾಮಾನುಜಾಚಾರ್ಯರು ಪ್ರತಿಪಾದಿಸಿದ ತತ್ವ - ವಿಶಿಷ್ಟಾದ್ವೈತ



Scanned with OKEN Scanner

Navachethana education YouTube & telegram channel Copy Rights Reserved

6. ರಾಮಾನುಜರು ದೇಶದ ನಾಲ್ಕೂ ದಿಕ್ಕಿನಲ್ಲಿ ಸಂಚರಿಸಿ ಶ್ರೀವೈಷ್ಣವ ಮತವನ್ನು ಪ್ರಚಾರ ಮಾಡಿದರು. ಮುಕ್ತಿಗೆ ಭಕ್ತಿ ಮತ್ತು ಶರಣಾಗತಿ ಮುಖ್ಯವೆಂದು ಸಾರಿದರು.

7.ರಾಮಾನುಜಾಚಾರ್ಯರಿಗೆ ಆಶ್ರಯ ನೀಡಿದ ಹೊಯ್ಸಳ ದೊರೆ ಯಾರು

- ಕರ್ನಾಟಕದ ಹೊಯ್ಸಳ ದೊರೆ ವಿಷ್ಣುವರ್ಧನ

8. ಶ್ರೀ ಬಸವೇಶ್ವರರು

- ಬಸವೇಶ್ವರರ ತಂದೆ ತಾಯಿ ಮಾದರಸ ಮತ್ತು ಮಾದಲಾಂಬಿಕೆ, ಬಸವನ ಬಾಗೇವಾಡಿ ಅಗ್ರಹಾರದ ಶೈವ ಬ್ರಾಹ್ಮಣರಾಗಿದ್ದರು.
- ಬಸವತತ್ವವನ್ನು ಶಕ್ತಿವಿಶಿಷ್ಟಾದ್ವೈತ ಎಂದು ಕರೆಯುತ್ತಾರೆ.
- 'ಕಾಯಕವೇ ಕೈಲಾಸ' ಇದು ಅವರ ಬೋಧನೆಗಳಲ್ಲಿ ಒಂದಾಗಿದೆ.
- ಬಸವಕಲ್ಯಾಣದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದರು.
- ಇವರ ಅಂಕಿತ ಕೂಡಲಸಂಗಮದೇವ

9. ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ವ - ದ್ವೈತ ಸಿದ್ಧಾಂತ

10. ಶ್ರೀ ಮಧ್ವಾಚಾರ್ಯರ ಆರಾಧ್ಯ ದೇವರು - ವಿಷ್ಣು

11. ಶ್ರೀ ಮಧ್ವಾಚಾರ್ಯರು ಉಡುಪಿಯಲ್ಲಿ ಶ್ರೀಕೃಷ್ಣನ ಪೂಜೆಗೆಂದು ಅಷ್ಟಯತಿಗಳನ್ನು ನೇಮಿಸಿದರು.



Scanned with OKEN Scanner

# ಭಕ್ತಿಪಂಥ

1.ಪ್ರೇಮ, ಸಹೋದರಭಾವ ಮತ್ತು ದಾನಶೀಲತೆ ಇವು ಬೋಧನೆಯ ತಿರುಳು ಅವರು ಭಾರತದ ಎಲ್ಲೆಡೆ ತೀರ್ಥಯಾತ್ರೆಗೈದು ಪ್ರೇಮದ ಸಂದೇಶ ಸಾರಿದರು- ಶ್ರಿ ಚೈತನ್ಯರು

2.ಸಿಖ್ ಧರ್ಮದ ಸ್ಥಾಪಕರು ಯಾರು - ಗುರು ನಾನಕ್

3.ಸಿಖ್‌ರ ಪವಿತ್ರ ಗ್ರಂಥ ಯಾವುದು - 'ಗುರುಗ್ರಂಥ ಸಾಹಿಬ್ '

4."ನನಗೆ ಒಂದು ಲಕ್ಷ ನಾಲಿಗೆಗಳಿದ್ದರೂ ಆ ಎಲ್ಲ ನಾಲಿಗೆಗಳಿಂದಲೂ ಒಬ್ಬನೇ ದೇವನನ್ನು ಸ್ಮರಿಸುತ್ತೇನೆ " - ಗುರು ನಾನಕ್

5. 'ಕಲಿಯುಗದ ರಾಧಾ ' ಎಂದು ಕರೆಯಲ್ಪಟ್ಟವರು ಯಾರು - ಮೀರಾಬಾಯಿ

6.ಮೀರಾಬಾಯಿ ಪೂಜಿಸುತ್ತಿದ್ದ ದೇವರ ಹೆಸರು - ಗಿರಿಧರ ಗೋಪಾಲ

7.ತಾನು 'ಅಲ್ಲಾ ಮತ್ತು ರಾಮನ ಶಿಶು' ಎಂಬುದಾಗಿ ಹೇಳಿದವರು

- ಕಬೀರ್ ದಾಸ್

8. ತುಳಸೀದಾಸರ ಪ್ರಸಿದ್ಧ ಕಾವ್ಯ - ರಾಮಚರಿತಮಾನಸ

9.ಸೂರ್‌ದಾಸ್ ಇವರು ಓರ್ವ ಸಂತ ಕವಿ. ಹುಟ್ಟು ಕುರುಡರು.' ಸೂರ್‌ಸಾಗರ' ಇವರ ಖ್ಯಾತ ಕೃತಿ



Scanned with OKEN Scanner

Navachethana education YouTube & telegram channel Copy Rights Reserved

10.ಸೂಫಿ ಪಂಥ ಮೊದಲು ಹುಟ್ಟಿಕೊಂಡದ್ದು – ಅರೇಬಿಯಾದಲ್ಲಿ

11.ಸೂಫಿ ಸಂತರು ಒರಟು ಉಣ್ಣೆಯ ಬಟ್ಟೆಗಳನ್ನು (ಸೂಫ್) ತೊಡುತ್ತಿದ್ದರು. ಆದ್ದರಿಂದ ಇವರನ್ನು ಸೂಫಿಗಳೆಂದು ಕರೆಯಲಾಯಿತು.

12.ಧರ್ಮವೆಂದರೆ ಪ್ರೇಮ, ಮಾನವ ಸೇವೆ' ಎಂಬುದಾಗಿ ಸೂಫಿಗಳು ಸಾರಿದರು , ಕೀರ್ತನ, ನರ್ತನ ಇವರ ಭಕ್ತಿಯ ವಿಧಾನವಾಗಿತ್ತು

- ಸೂಫಿ ಅನುಯಾಯಿ ಬಿಯಾ ಎಂಬ ಮಹಿಳೆಯನ್ನು ಇಂದಿಗೂ ಪೂಜ್ಯ ಭಾವನೆಯಿಂದ ಕಾಣುತ್ತಾರೆ.

13. ಕೆಳಗಿನ ಹೇಳಿಕೆಯನ್ನು ಗಮನಿಸಿ

A. ಭಾರತದ ಪ್ರಮುಖ ಸೂಫಿ ಸಂತ, ಇವರು ದಿಲ್ಲಿಯಲ್ಲಿ ನೆಲೆಸಿ ಬಡತನದ ಜೀವನ ನಡೆಸಿದರು.

B. ಹುಲ್ಲು ಮಾಡಿನ ಮಸೀದಿ ಇವರ ಚಟುವಟಿಕೆಯ ಕೇಂದ್ರವಾಗಿತ್ತು.

C. ದಿಲ್ಲಿಯ ಸುಲ್ತಾನ ದಾನವಾಗಿ ನೀಡಿದ್ದ ಗ್ರಾಮವೊಂದನ್ನು ಇವರು ತಿರಸ್ಕರಿಸಿದರು.ರಾಜಕಾರಣದಿಂದ ದೂರ ಉಳಿದರು.

D. ತಮ್ಮನ್ನು ಕಾಣಲು ಬರುತ್ತಿದ್ದ ಭಕ್ತರಿಗೆ ಸದ್ಗುಣ, ಕರುಣೆಯ ಸಂದೇಶ ನೀಡುತ್ತಿದ್ದರು.

ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

- ನಿಜಾಮುದ್ದೀನ್ ಔಲಿಯ

14. ಕರ್ನಾಟಕದ ಖ್ಯಾತ ಸೂಫಿ ಸಂತರು - ಬಂದೇನವಾಜ್



Scanned with OKEN Scanner

Navachethana education YouTube & telegram channel Copy Rights Reserved

15. ಸೂಫಿ ಪಂಥದಲ್ಲಿ ಚಿಸ್ತಿ ಪಂಗಡ ಪ್ರಮುಖವಾದುದು ಇದರ ಸ್ಥಾಪಕ

- ಮುಯಿನುದ್ದೀನ್ ಚಿಸ್ತಿ

16. ಆಗ್ರಾದ ಫತ್ತೇಪುರ್' ಎಂಬಲ್ಲಿನ ಸಲೀಮ್ ಚಿಸ್ತಿ ಪ್ರಸಿದ್ಧರು.

### ಕಾಲಗಣನೆ

1. ಶಂಕರಾಚಾರ್ಯರು - 8-9ನೇ ಶತಮಾನ
2. ರಾಮಾನುಜಾಚಾರ್ಯರು - 11- 12ನೇ ಶತಮಾನ
3. ಬಸವೇಶ್ವರರು - 12ನೇ ಶತಮಾನ
4. ಮಧ್ವಾಚಾರ್ಯರು - 13-14ನೇ ಶತಮಾನ
5. ಶ್ರೀ ಚೈತನ್ಯ - 1486-1534
6. ಗುರು ನಾನಕ - 1469-1538
7. ಮೀರಾಬಾಯಿ - 1498-1546
8. ನಿಜಾಮುದ್ದೀನ್ ಔಲಿಯ - 1238-1325
9. ಮುಯಿನುದ್ದೀನ್ ಚಿಸ್ತಿ - 13ನೇ ಶತಮಾನ
10. ಬಂದೇನವಾಜ್ - 15ನೇ ಶತಮಾನ
11. ಸಲೀಮ್ ಚಿಸ್ತಿ - 16ನೇ ಶತಮಾನ

NAVACHETANA EDUCATIONS
7019752139



Scanned with OKEN Scanner

NAVACHETANA EDUCATIONS
7019752139

# ವಿಜಯ ನಗರ ಸಾಮ್ರಾಜ್ಯ ಹಾಗೂ ಬಹುಮನಿ ರಾಜ್ಯ

1.ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ವರ್ಷ - ಸಾ.ಶ 1336

2.ಸಂಗಮನೆಂಬಾತನ ಪುತ್ರರು ತುಂಗಾಭದ್ರಾ ನದಿಯ ದಕ್ಷಿಣ ದಂಡೆಯ ಮೇಲೆ ಸಾಮ್ರಾಜ್ಯದ ಅಡಿಪಾಯ ಹಾಕಿದರು - ಹರಿಹರ ಮತ್ತು ಬುಕ್ಕ

3.ವಿಜಯನಗರ ಸಾಮ್ರಾಜ್ಯದ ಸಂಗಮ ಸಹೋದರರು

- ಹರಿಹರ, ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ

4. ವಿಜಯನಗರ ಸಾಮ್ರಾಜ್ಯದ 4 ಮನೆತನಗಳು

1. ಸಂಗಮ
2. ಸಾಳುವ
3. ತುಳುವ
4. ಅರವೀಡು

5. ವಿಜಯನಗರ ಸಾಮ್ರಾಜ್ಯದ ಕುಲದೇವರು - ಶ್ರೀ ವಿರೂಪಾಕ್ಷ

6. 'ಹಿಂದೂರಾಯ ಸುರತ್ರಾಣ' ಎಂಬುದು ವಿಜಯನಗರ ಅರಸರ ಬಿರುದು

7. ಹಂಪಿಯಲ್ಲಿ ಹೊಸ ರಾಜಧಾನಿ ಕಟ್ಟಲು ಪ್ರಾರಂಭಿಸಿದವನು - ಹರಿಹರ

8. ಯಾರ ಆಳ್ವಿಕೆಯ ಕಾಲದಲ್ಲಿ ಬಹುಮನಿ ರಾಜ್ಯವು ಸ್ಥಾಪನೆಗೊಂಡಿತು

- ಹರಿಹರ



Scanned with OKEN Scanner

9. ಸಂಗಮ ವಂಶದ ಪ್ರಸಿದ್ಧ ದೊರೆ - ಪ್ರೌಢದೇವರಾಯ

( ಎರಡನೆಯ ದೇವರಾಯ )

10. ಪ್ರೌಢದೇವರಾಯ ಯಾರನ್ನು ತನ್ನ ಸಾಮ್ರಾಜ್ಯದ ಸೈನ್ಯಕ್ಕೆ ಸೇರಿಸಿಕೊಂಡನು

- ಅಶ್ವಾರೋಹಿ ಮಹಮ್ಮದೀಯರು

11. ಪ್ರೌಢದೇವರಾಯನ ಆಸ್ಥಾನಕ್ಕೆ ಭೇಟಿ ನೀಡಿದ್ದ ಪರ್ಷಿಯಾದ ರಾಯಭಾರಿ

- ಅಬ್ದುಲ್ ರಜಾಕ್

12. "ಇಡೀ ಭಾರತದಲ್ಲಿ ದೇವರಾಯನಂಥ ಅರಸನಿಲ್ಲ" ಎಂದು ಹೇಳಿರುವನಲ್ಲದೆ, "ರಾಯನ ಸೇನೆ ಲಕ್ಷಾವಧಿ ಸಂಖ್ಯೆಯಲ್ಲಿದೆ" ಎಂದಿದ್ದಾನೆ. - ಅಬ್ದುಲ್ ರಜಾಕ್

13. ಪ್ರೌಢದೇವರಾಯನಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.

A. ದೇವರಾಯನು ಸಮರ್ಥ ಆಡಳಿತಗಾರ, ಧೀರ ಯೋಧ ಹಾಗೂ ವಿದ್ವಾಂಸನಾಗಿದ್ದನು. ☑

B. ಹಂಪಿಯ ಮನಮೋಹಕ ಹಜಾರ ರಾಮಸ್ವಾಮಿ ದೇವಾಲಯವನ್ನು ಕಟ್ಟಿಸಿದವನು ಈತನೇ

C. . ಪರಧರ್ಮಸಹಿಷ್ಣುತೆ .ದೇವರಾಯನ ಧರ್ಮನೀತಿಯಾಗಿತ್ತು.ಇವನು ರಾಜಧಾನಿಯಲ್ಲಿ ಮಸೀದಿಯನ್ನು ನಿರ್ಮಿಸಿದನು. ☑

D. ಈತನ ಕಾಲದಲ್ಲಿ ಜೈನ ಮತ್ತು ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ವೀರಶೈವ ಪಂಥ ಏಳಿಗೆ ಕಂಡಿತು. ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ವಿಪುಲವಾದ ಸಾಹಿತ್ಯ ರಚನೆಯಾಯಿತು. ☑

ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ



Scanned with OKEN Scanner

**14.** ತುಳುವ ವಂಶದ ಪ್ರಸಿದ್ಧ ದೊರೆ - ಕೃಷ್ಣದೇವರಾಯ

**15.** ಕೃಷ್ಣದೇವರಾಯ ಸಾಧನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.

**A.** ಕೃಷ್ಣದೇವರಾಯನು ಉತ್ತಮ ಆಡಳಿತಗಾರನಾಗಿದ್ದನು. ಸರ್ಕಾರದ ಆದಾಯದ ಕಾಲು ಭಾಗವನ್ನು ದಾನಧರ್ಮ ಮತ್ತು ಜನಕಲ್ಯಾಣ ಕಾರ್ಯಕ್ಕಾಗಿ ಬಳಸುತ್ತಿದ್ದನು. ☑

**B.** ಇವನ ಕಾಲದಲ್ಲಿ ಕೃಷಿ ಮತ್ತು ವ್ಯಾಪಾರ ಅಭಿವೃದ್ಧಿ ಹೊಂದಿದವು ಮತ್ತು ವಸ್ತುಗಳು ಅಗ್ಗವಾಗಿದ್ದುವು. ☑

**C.** ಕೃಷ್ಣದೇವರಾಯನು ಸಂಸ್ಕೃತ ಮತ್ತು ತೆಲುಗು ಭಾಷೆಗಳಲ್ಲಿ ವಿದ್ವಾಂಸನಾಗಿದ್ದನು. ಈತನು ತೆಲಗಿನಲ್ಲಿ ಅಮುಕ್ತಮೌಲ್ಯದ ಮತ್ತು ಸಂಸ್ಕೃತದಲ್ಲಿ ಜಾಂಬವತಿ ಕಲ್ಯಾಣ ಎಂಬ ಕೃತಿಯನ್ನು ರಚಿಸಿದನು ☑

**D.** ಕನ್ನಡ ರಾಜ್ಯರಮಾರಮಣ ಎಂಬುದು ಈತನ ಬಿರುದು ☑

ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

**16.** ವಿಜಯನಗರ ಸಾಮ್ರಾಜ್ಯವು ಕೃಷ್ಣದೇವರಾಯನ ಆಳ್ವಿಕೆಯ ಅನಂತರ ದುರ್ಬಲಗೊಂಡಿತು. ಸಾಮ್ರಾಜ್ಯವನ್ನು ಮತ್ತೊಮ್ಮೆ ವೈಭವಕ್ಕೇರಿಸಿದ ಕೀರ್ತಿ

- ಕೃಷ್ಣದೇವರಾಯನ ಅಳಿಯನಾದ ರಾಮರಾಯನಿಗೆ ಸಲ್ಲುತ್ತದೆ,

**17.** ವಿಜಯನಗರ ಸಾಮ್ರಾಜ್ಯದ ಅವನತಿಯಿಂದಾಗಿ ದಕ್ಷಿಣ ಭಾರತದಲ್ಲಿ ಅನೇಕ ಮಹತ್ವದ ರಾಜಕೀಯ ಬದಲಾವಣೆಗಳಾದವು ಕಾರಣ ಏನು

- ಸಾಮಾಜ್ಯದ ಉತ್ತರ ಭಾಗವು ವಿಜಯಪುರ ಮತ್ತು ಗೋಲ್ಕೊಂಡ ರಾಜ್ಯಗಳ ವಶವಾದವು,



Scanned with OKEN Scanner

- ಕರ್ನಾಟಕದಲ್ಲಿ ಕೆಳದಿ, ಮೈಸೂರು, ಚಿತ್ರದುರ್ಗ ಮುಂತಾದ ಸಾಮಂತರಾಜರು ಸ್ವತಂತ್ರರಾದರು.

18. ವಿಜಯನಗರದ ರಾಜಧಾನಿಯನ್ನು ಕುರಿತು ಪೋರ್ಚುಗೀಸ್ ಯಾತ್ರಿಕ, "ಎಲ್ಲ ಬಗೆಯ ಸರಕುಗಳಿಂದ ಸಮೃದ್ಧವಾದ ಇಂಥ ನಗರಿಯು ಭೂಮಂಡಲದ ಮೇಲೆ ಬೇರೊಂದೆಡೆ ಇಲ್ಲ" ಎಂದಿದ್ದಾನೆ - ಡೊಮಿಂಗೋ ಪಾಯಿಸ್

19. ವಿಜಯನಗರದ ರಾಜಧಾನಿಯನ್ನು ಸಂದರ್ಶಿಸಿದ್ದ ಪರ್ಷಿಯ (ಇರಾನ್) ದೇಶದ ರಾಯಭಾರಿ ದೇವರಾಯನ ಘನತೆಯನ್ನು ಮನಸಾರೆ ಕೊಂಡಾಡಿದ್ದಾನೆ. "ಭೂಮಂಡಲದ ಮೇಲೆ ವಿಜಯನಗರದಂತಹ ಇನ್ನೊಂದು ನಗರವನ್ನು ಕಣ್ಣುಗಳು ನೋಡಿಲ್ಲ, ಕಿವಿಗಳು ಕೇಳಿಲ್ಲ" ಎಂದು ಉದ್ಗರಿಸಿದ್ದಾನೆ - ಅಬ್ದುಲ್ ರಜಾಕ್

20. ಜನಪ್ರಿಯವಾಗಿದ್ದ ನವರಾತ್ರಿ ಉತ್ಸವವನ್ನು ರಾಜಧಾನಿಯ ಮಹಾನವಮಿ ದಿಬ್ಬದಲ್ಲಿ ವಿಜೃಂಭಣೆಯಿಂದ ಆಚರಿಸಲಾಗುತ್ತಿತ್ತು.

21. ವಿಜಯನಗರ ಕಾಲದ ಕನ್ನಡದ ಶ್ರೇಷ್ಠ ಕವಿಗಳು - ಕುಮಾರವ್ಯಾಸ ಚಾಮರಸ ಮತ್ತು ರತ್ನಾಕರವರ್ಣಿ

22. ವಿಜಯನಗರ ಕಾಲದ ತೆಲುಗು ಸಾಹಿತ್ಯದ "ಸುವರ್ಣಯುಗ'ವಾಗಿತ್ತು.

23. ಹೊಂದಿಸಿ ಬರೆಯಿರಿ

1. ಕುಮಾರವ್ಯಾಸ (ನಾರಣಪ್ಪ) - ಕರ್ಣಾಟಭಾರತ ಕಥಾಮಂಜರಿ
2. ಚಾಮರಸನ - ಪ್ರಭುಲಿಂಗಲೀಲೆ
3. ರತ್ನಾಕರವರ್ಣಿ - ಭರತೇಶ ವೈಭವ



Scanned with OKEN Scanner

24. ವಿಜಯನಗರದ ಅರಸರು ನೃತ್ಯಕಲೆ, ಚಿತ್ರಕಲೆ ಹಾಗೂ ಸಂಗೀತವನ್ನು ವಿಶೇಷವಾಗಿ ಪ್ರೋತ್ಸಾಹಿಸಿದರು. ಆ ಕಾಲದಿಂದ ಕರ್ನಾಟಕ ಸಂಗೀತ ಎಂಬ ಹೆಸರು ಪ್ರಚಲಿತವಾಯಿತು.

25. ಕರ್ನಾಟಕ ಸಂಗೀತ ಪಿತಾಮಹ - ಪುರಂದರದಾಸರು

26. ಕನಕದಾಸರ ಪ್ರಮುಖ ಕೃತಿಗಳು - ಮೋಹನ ತರಂಗಿಣಿ, ರಾಮಧಾನ್ಯ ಚರಿತ್ರೆ ಮತ್ತು ಹರಿಭಕ್ತಿಸಾರ

27. ವಿಜಯನಗರ ಕಾಲದ ಈ ದೇವಾಲಯಗಳು ಹಂಪಿಯಲ್ಲಿ ಕಂಡುಬರುತ್ತದೆ

- ಹಜಾರ ರಾಮಸ್ವಾಮಿ, ವಿಜಯ ವಿಠಲ ಸ್ವಾಮಿ, ಕೃಷ್ಣಸ್ವಾಮಿ, ಅಚ್ಯುತರಾಯ

28. ಶೃಂಗೇರಿಯ ವಿದ್ಯಾಶಂಕರ ದೇವಾಲಯ, ರಾಮೇಶ್ವರ ದೇವಾಲಯದ ಸಾವಿರ ಕಂಬಗಳ ಮಂಟಪ ಮತ್ತು ಮೂಡಬಿದಿರೆಯ ಸಾವಿರ ಕಂಬದ ಬಸದಿ (ತ್ರಿಭುವನ ತಿಲಕ ಚೂಡಾಮಣಿ) ವಿಜಯನಗರ ಕಾಲದ್ದು.

## ಬಹಮನಿ ಸಾಮ್ರಾಜ್ಯ

1.ಭೀಮಾ ನದಿ ದಂಡೆಯ ಮೇಲೆ ಫಿರೋಜ್ ಷಾನಿಂದ ನಿರ್ಮಾಣವಾದ ನಗರ ಯಾವುದು

- ಫಿರೋಜಾಬಾದ್

2.ಫಿರೋಜ್ ಷಾ ಎಲ್ಲಿ ಆಕಾಶ ವೀಕ್ಷಣಾಲಯವನ್ನು ಸ್ಥಾಪಿಸಿದನು

- ದೌಲತಾಬಾದ್‌ನಲ್ಲಿ (ಮಹಾರಾಷ್ಟ್ರ



Scanned with OKEN Scanner

3.ಭೂಮಿಯನ್ನು ಅಳತೆ ಮಾಡಿಸಿ, ಫಲವತ್ತತೆ,ನೀರಾವರಿ ಸೌಲಭ್ಯಗಳ ಆಧಾರದ ಮೇಲೆ ಕಂದಾಯ ನಿಗದಿ ಮಾಡಿದ ಬಹುಮನಿ ಸುಲ್ತಾನರ ಮಂತ್ರಿ ಯಾರು - ಮಹಮ್ಮದ್ ಗವಾನ್

4.ಬೀದರ್‌ನಲ್ಲಿ 'ಮದರಸಾ' ಎಂಬ ಕಾಲೇಜನ್ನು ( ಮಹಾವಿದ್ಯಾಲಯ) ನಿರ್ಮಿಸಿದವರು ಯಾರು – ಮಹಮ್ಮದ್ ಗವಾನ್

5.ಬಹಮನಿ ಸುಲ್ತಾನ 3ನೇ ಮಹಮ್ಮದ್ ಷಾನ ಪ್ರಧಾನಮಂತ್ರಿ ಯಾಗಿದ್ದವನು ಯಾರು - ಮಹಮ್ಮದ್ ಗವಾನ್

6. ಹೊಂದಿಸಿ ಬರೆಯಿರಿ

A. ಬಿಜಾಪುರ - ಆದಿಲ್ ಷಾಹಿ
B. ಬೀದರಿನ - ಬರೀದ್ ಷಾಹಿ
C. ಗೋಲ್ಕೊಂಡ- ಕುತುಬ್ ಷಾಹಿ
D. ಅಹ್ಮದ್‌ನಗರದ - ನಿಜಾಂಷಾಹಿ
E. ಬಿರಾರಿನ - ಇಮದ್‌ಷಾಹಿ

7..ಬಹಮನಿ ರಾಜ್ಯದ ಆಡಳಿತವು ಇಸ್ಲಾಮೀ ಕಾನೂನುಗಳ ಪ್ರಕಾರ ನಡೆಯುತ್ತಿತ್ತು

8.ಬಹಮನಿ ಸುಲ್ತಾನರ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.

A. ಬಹಮನಿ ಸುಲ್ತಾನರು ಪರದೇಶದ ವಿದ್ವಾಂಸರಿಗೆ ಆಶ್ರಯ ನೀಡಿದರು. ಅರಬ್ಬಿ ಮತ್ತು ಪಾರಸಿ ಸಾಹಿತ್ಯವು ಇದರಿಂದ ಪ್ರೋತ್ಸಾಹ ಪಡೆಯಿತು.☑
B. ಬಂದೇನವಾಜ್ ಎಂಬ ಖ್ಯಾತ ಸೂಫಿ ಸಂತ ಹಾಗೂ ಗ್ರಂಥಕಾರ ಇದೇ ಕಾಲದವರು☑
C. ಇವರು ಮತ್ತು ಇನ್ನಿತರ ವಿದೇಶಿ ವಿದ್ವಾಂಸರು ಬಳಸಿದ ಭಾಷೆ 'ದಖಿನಿ' ಎಂದು ಪ್ರಸಿದ್ಧವಾಯಿತು.☑



Scanned with OKEN Scanner

D. ಮುಂದೆ ಇದೇ ಉರ್ದು ಭಾಷೆಯ ಬೆಳವಣಿಗೆಗೆ ಕಾರಣವಾಯಿತು. ☑

ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

9. ಬಹಮನಿಗಳ ಮೊದಲ ರಚನೆಯೆಂದರೆ ಕಲಬುರಗಿಯ ಜಾಮೀ ಮಸೀದಿ

ಇದು ಮಹಮ್ಮದ್ ಷಾನ ರಚನೆ

10. ಉರ್ದುಭಾಷೆಯಲ್ಲಿ 'ಕಿತಾಬ್-ಇ- ನವರಸ್ 'ಪುಸ್ತಕವನ್ನು ಬರೆದವರು

- 2ನೇ ಇಬ್ರಾಹಿಂ ಆದಿಲ್ ಷಾ.

11. 'ದಖನಿನ ತಾಜ್ ಮಹಲ್' ಎಂದು ಹೆಸರಾದ ಸ್ಮಾರಕ - 'ಇಬ್ರಾಹಿಂ ರೋಜಾ'

12. ವಿಜಯಪುರದಲ್ಲಿ 'ಇಬ್ರಾಹಿಂ ರೋಜಾ'ವನ್ನು ನಿರ್ಮಿಸಿದವರು

- 2ನೇ ಇಬ್ರಾಹಿಂ ಆದಿಲ್ ಷಾ

13. ವಿಶ್ವ ಪ್ರಸಿದ್ಧ ವಿಜಯಪುರದ ಗೋಲಗುಂಬಜ ( ಗೊಳಗುಮ್ಮಟ ) ವನ್ನು ನಿರ್ಮಿಸಿದ ಸುಲ್ತಾನ - ಮಹಮ್ಮದ ಆದಿಲ್ ಷಾ

- ಅಸಾರ್ ಮಹಲ್ ಅವನ ಇನ್ನೊಂದು ಸುಂದರ ರಚನೆ

14. ದಕ್ಷಿಣ ಭಾರತದ ದೊಡ್ಡ ಮಸೀದಿ – ಬಿಜಾಪುರದ ಜುಮಾ ಮಸೀದಿ, (ಜಾಮೀ ಮಸೀದಿ)



Scanned with OKEN Scanner

## ಕಾಲಗಣನೆ

1. ವಿಜಯನಗರ ಸಾಮ್ರಾಜ್ಯದ ಸ್ಥಾಪನೆ - 1336
2. ಸಾಮ್ರಾಜ್ಯದ ಆಳ್ವಿಕೆಯ ಕಾಲ- 1336-1646
3. ಕೃಷ್ಣದೇವರಾಯನ ಆಳ್ವಿಕೆಯ ಕಾಲ - 1509-1529
4. ರಕ್ಕಸತಂಗಡಿ ಕದನ - ಜನವರಿ 23, 1565
5. ಬಹಮನಿ ರಾಜ್ಯದ ಆಳ್ವಿಕೆಯ ಕಾಲ - 1347-1489
6. ಬೀದರ್‌ನಲ್ಲಿ ಮದ್ರಸಾ ಸ್ಥಾಪನೆ - 1461
7. ಆದಿಲ್ ಷಾಹಿಗಳ ಆಳ್ವಿಕೆಯ ಕಾಲ - 1489-1686
8. ಇಬ್ರಾಹಿಂ ರೋಜಾ ರಚನೆ - 1626
9. ಗೋಲಗುಂಬಜದ ರಚನೆ - ಸುಮಾರು 1650

## ಮೊಘಲರು ಹಾಗೂ ಮರಾಠರು

1. ಮೊಘಲ್ ಸಾಮ್ರಾಜ್ಯದ ಸ್ಥಾಪಕ - ಬಾಬರ್

2. ಬಾಬರ್ ಯಾವ ಸಂತತಿಯವನು - ಮಂಗೋಲ್

3.' ಮೊಘಲ್ ' ಪದದ ಮೂಲ ಯಾವುದು - ಮಂಗೋಲ್

4. ಭಾರತಕ್ಕೆ ಗುಲಾಬಿಯನ್ನು ಪರಿಚಯಿಸಿದವರು - ಬಾಬರ್



Scanned with OKEN Scanner

5. ಹುಮಾಯೂನ್ ನ್ನು ಸೋಲಿಸಿದ ಆಫ್ಘನ್ ಸರದಾರ ಯಾರು

- ಶೇರ್‌ಷಾ ಸೂರಿ

6. ಅಕ್ಬರ್ ಮತ್ತು ರಜಪೂತ ದೊರೆ ರಾಣಾಪ್ರತಾಪ ಸಿಂಹನ ನಡುವೆ ನಡೆದ ಕದನ - ಹಾಲ್ದಿಘಾಟ್ ಕದನ ( ಸಾ.ಶ 1576 )

7. ರಾಣಾ ಪ್ರತಾಪಸಿಂಹ ಈ ಹೆಸರಿನ ತನ್ನ ನೆಚ್ಚಿನ ಕುದುರೆಯನ್ನೇರಿ ರಣರಂಗದಲ್ಲಿ ಹೋರಾಡಿದನು - ಚೇತಕ್

8. ಅಕ್ಬರ್ ಯಾವ ಪ್ರದೇಶವನ್ನು ಗೆದ್ದು ಬೃಹತ್ ಸಾಮ್ರಾಜ್ಯವನ್ನು ಸ್ಥಾಪಿಸಿದನು - ಗುಜರಾತ್, ಬಂಗಾಳ, ಕಾಶ್ಮೀರ, ಕಾಬೂಲ್

9.ಯಾರು ಹಿಂದುಗಳ ಮೇಲೆ ವಿಧಿಸಿದ್ದ ಜೆಸಿಯಾ ( ಜಿಜಿಯಾ ) ಎಂಬ ತಲೆಗಂದಾಯ ಹಾಗೂ ಯಾತ್ರಾ ತೆರಿಗೆಯನ್ನು ರದ್ದುಪಡಿಸಿದನು

- ಅಕ್ಬರ್

10.ಅಕ್ಬರನ ಕಾಲದಲ್ಲಿ ಭೂ ಕಂದಾಯ ಪದ್ಧತಿಯನ್ನು ರೂಪಿಸಿದವನು

- ರಾಜಾ ತೋದರ್ ಮಲ್

11.ಅಕ್ಬರನ ಧಾರ್ಮಿಕ ನೀತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನುಗುರುತಿಸಿ

**A.** ಅಕ್ಬರನು ಧಾರ್ಮಿಕ ಸಹಿಷ್ಣುವಾಗಿದ್ದನು. ತನ್ನ ಹೊಸ ರಾಜಧಾನಿಯಾದ ಫತೇಪುರ್ ಸಿಕ್ರಿಯಲ್ಲಿ ಇಬಾದತ್ ಖಾನಾ ಎಂಬ ಪಾರ್ಥನಾ ಮಂದಿರ ಕಟ್ಟಿಸಿದನು. ☑



Scanned with OKEN Scanner



Scanned with OKEN Scanner

B. ಇಲ್ಲಿ ಇಸ್ಲಾಮಿ ಪಂಥಗಳ ಮುಖಂಡರೊಡನೆ ಧಾರ್ಮಿಕ ವಿಚಾರಗಳನ್ನು ಚರ್ಚಿಸಿದನು. ಹಿಂದು. ಜೈನ, ಬೌದ್ಧ, ಪಾರ್ಸಿ, ಕ್ರಿಶ್ಚಿಯನ್ ಮುಂತಾದ ಧಾರ್ಮಿಕ ಮುಖಂಡರನ್ನೂ ಇಲ್ಲಿಗೆ ಕರೆಸಿ ಅವರ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದನು.☑

C. ಈ ಚಿಂತನೆಗಳ ಫಲವಾಗಿ ಅಕ್ಬರ್ 'ದೀನ್-ಎ ಇಲಾಹಿ' ಎಂಬ ತನ್ನದೇ ಆದ ಹೊಸ ಪಂಥವನ್ನು ಸ್ಥಾಪಿಸಿದನು.☑

D. ಅದು ಎಲ್ಲ ಮತಧರ್ಮಗಳ ಉತ್ತಮ ಅಂಶಗಳನ್ನು ಒಳಗೊಂಡಿತ್ತು. ಆದರೆ ಕೇವಲ ಬೆರಳೆಣಿಕೆಯಷ್ಟು ಮಂದಿ ಮಾತ್ರವೇ ಅದರ ಅನುಯಾಯಿಗಳಾಗಿದ್ದರು.☑

ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

12. ಅಕ್ಬರನ ಕಾಲದಲ್ಲಿದ ಆಸ್ಥಾನದ ಗಣ್ಯ ಕವಿಗಳು -

- ಫೈಜಿ, ಅಬುಲ್ ಫಜಲ್ ಮತ್ತು ಬೀರಬಲ್

13. ಅಕ್ಬರ್ ಆಸ್ಥಾನದ ಅಮರ ಸಂಗೀತಗಾರ - ತಾನ್ ಸೇನ್

14. ಷಹಜಹಾನ್ ಆಗ್ರಾದಲ್ಲಿ ಖ್ಯಾತ ತಾಜ್‌ಮಹಲ್, ದಿಲ್ಲಿಯಲ್ಲಿ ಬೃಹತ್ ಕೆಂಪುಕೋಟೆ ಮತ್ತು ಭವ್ಯ ಅರಮನೆಗಳನ್ನು ನಿರ್ಮಾಣ ಮಾಡಿಸಿ ಪ್ರಸಿದ್ಧಿ ಪಡೆದನು.

15. ಷಹಜಹಾನನ ನಂತರ ಮೊಘಲ್ ಸಿಂಹಾಸನವನ್ನೇರಿದವನು ಯಾರು

- ಔರಂಗಜೇಬ್

16. ಮಧ್ಯಪಾನ, ಜೂಜು, ಮೋಜು, ಸಂಗೀತಗಳಿಂದ ದೂರವಿದ್ದು ಸಂಪ್ರದಾಯವಾದಿ ಮುಸ್ಲಿಂನಾಗಿದ್ದ ಮೊಘಲ್ ದೊರೆ ಯಾರು

- ಔರಂಗಜೇಬ್



Scanned with OKEN Scanner

**17. ಅಕ್ಬರ್ ರದ್ದುಪಡಿಸಿದ್ದ ಜೆಸಿಯಾ ತೆರಿಗೆಯನ್ನು ಮತ್ತೆ ಜಾರಿಗೆ ತಂದದ್ದು ಯಾರು**

- ಔರಂಗಜೇಬ್

**18. ಔರಂಗಜೇಬ್ ಆಳ್ವಿಕೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.**

A. ಔರಂಗಜೇಬನ ಮತೀಯ ಧೋರಣೆಯು ಸಿಖ್ಖರು, ಮರಾಠರು ಮತ್ತು ಜಾಟರನ್ನು ಕೆರಳಿಸಿತು. ☑

B. ಸಿಖ್ ಗುರು ತೇಜ್ ಬಹಾದೂರ್‌ನನ್ನು ದಿಲ್ಲಿಯಲ್ಲಿ ಬಹಿರಂಗವಾಗಿ ಕೊಲ್ಲಲಾಯಿತು ☑

C. . ಅವನ ಮಗ ಗುರು ಗೋವಿಂದಸಿಂಹನು ಇಡಿ ಸಿಖ್ ಸಮುದಾಯಕ್ಕೆ ವೀರದೀಕ್ಷೆ ನೀಡಿದನು. ದೀಕ್ಷೆ ಪಡೆದವರಿಗೆ ಸಿಂಗ್ (ಸಿಂಹ) ಎಂಬ ನಾಮಾಂಕಿತ ನೀಡಲಾಯಿತು. ☑

**ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ**

**19. ಮೊಘಲರ ಆಡಳಿತಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನುಗುರುತಿಸಿ**

A. ಮೊಘಲ ಸಾಮಾಟನೇ ಎಲ್ಲ ನಾಗರಿಕ ಮತ್ತು ಸೈನಿಕ ಅಧಿಕಾರ ಹೊಂದಿದ್ದನು, ನ್ಯಾಯ ನೀಡಿಕೆಯಲ್ಲಿ ಈತನದು ಅಂತಿಮ ನಿರ್ಣಯವಾಗಿತ್ತು. ☑

B. ಸಾಮ್ರಾಜ್ಯವನ್ನು ಪ್ರಾಂತ (ಸುಬಾ), ಜಿಲ್ಲೆ (ಸರ್ಕಾರ) ಮತ್ತು ತಾಲ್ಲೂಕುಗಳಾ) (ಪರಗಳು) ವಿಂಗಡಿಸಲಾಗಿತ್ತು. ☑

C. ನಗರಗಳಲ್ಲಿ ಕೊತ್ವಾಲ ಎಂಬ ಅಧಿಕಾರಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುತ್ತಿದ್ದನು ☑

**ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ**



Scanned with OKEN Scanner

20.ಮೊಘಲರು ಪರ್ಷಿಯನ್ ಸಾಹಿತ್ಯಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು.

21. ಅಕ್ಬರನ ಆಸ್ಥಾನದಲ್ಲಿ ಅಬುಲ್ ಫಜಲ್, ನಿಜಾಮುದ್ದೀನ್ ಮತ್ತು ಬದೌನಿ ಎಂಬವರು ಪ್ರಸಿದ್ಧ ಇತಿಹಾಸಕಾರರಾಗಿದ್ದರು.

22.ಅಬುಲ್ ಫಜಲ್ ನ ಪ್ರಮುಖ ಕೃತಿ - ಅಕ್ಬರ್‌ನಾಮಾ

23. ಭಗವದ್ಗೀತೆಯನ್ನು ಪರ್ಷಿಯನ್ ಗೆ ಭಾಷಾಂತರ ಮಾಡಿದವನು
- ದಾರಾ ಷುಕೋ

24. ದಿಲ್ಲಿಯಲ್ಲಿರುವ ಹುಮಾಯೂನನ ಸಮಾಧಿಯು ಅಕ್ಬರನ ಆರಂಭ ಕಾಲದ ನಿರ್ಮಾಣವಾಗಿದೆ.

25. ಷಹಜಹಾನಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ಷಹಜಹಾನನು ಆಗ್ರಾ ಕೋಟೆಯೊಳಗೆ ಕಟ್ಟಿಸಿದ ಅರಮನೆ, ಮೋತಿ ಮಹಲ್ ಅಮೋಘವಾಗಿವೆ.☑

B. ಈತನು ಆಗ್ರಾದಲ್ಲಿ ತನ್ನ ಪ್ರೀತಿಯ ರಾಣಿಯಾದ ಮುಲ್ತಾಜ್ ಮಹಲ್ ಳ ಸ್ಮರಣಾರ್ಥವಾಗಿ ನಿರ್ಮಿಸಿದ ತಾಜ್ ಮಹಲ್ ಮೊಘಲ್ ವಾಸ್ತುಶಿಲ್ಪಕ್ಕೆ ಕಳಸಪ್ರಾಯವಾಗಿದೆ.☑

C. ದಿಲ್ಲಿಯ ಪ್ರಸಿದ್ಧ ಕೆಂಪು ಕೋಟೆಯನ್ನು ಕೂಡ ಷಹಜಹಾನನು ಕಟ್ಟಿಸಿದರು.☑

ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ



Scanned with OKEN Scanner

26. ಮೊಘಲರ ಕಾಲದಲ್ಲಿ ನೂತನ ಚಿತ್ರಕಲಾ ಸಂಪ್ರದಾಯ ಒಂದು ಹುಟ್ಟಿಕೊಂಡಿತ್ತು - ಚಿಕಿಣಿ

27. ಸಂಗೀತವನ್ನು ನಿಷೇಧಿಸಿದ ಮೊಘಲ್ ದೊರೆ - ಔರಂಗಜೇಬ್

28. ಕೆಳಗಿನ ಹೇಳಿಕೆಗಳನ್ನು ಗಮನಿಸಿ

A. ಪರ್ಷಿಯದ ದಾಳಿಕೋರನು ದಿಲ್ಲಿಯ ಮೇಲೆ ಆಕ್ರಮಣಗೈದನು.

B.ಮೊಘಲರು ಎರಡು ನೂರು ವರ್ಷ ಕಾಲ ಸಂಗ್ರಹಿಸಿದ ಧನಕನಕಾದಿಗಳನ್ನು ಸೂರೆಗೈದನು.

C.ಜಗತ್ಪಸಿದ್ಧ ಕೊಹಿನೂರ್ ವಜ್ರ ಹಾಗೂ ಷಹಜಹಾನನ ಮಯೂರ ಸಿಂಹಾಸನ ಅವನು ಒಯ್ದುನು. ಮೊಘಲರ ಖಜಾನೆ ಬರಿದಾಯಿತು.

ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು

- ನಾದಿರ್ ಷಾ

## ಮರಾಠರು

1. ಮರಾಠ ಸಾಮ್ರಾಜ್ಯ ಸ್ಥಾಪಕ – ಶಿವಾಜಿ

2. ಶಿವಾಜಿಯ ತಂದೆ - ತಾಯಿಯ ಹೆಸರು – ಷಹಜಿ ಭೋಸ್ಲೆ , ಜೀಜಾಬಾಯಿ

3. ಶಿವಾಜಿಯ ಜನ್ಮಸ್ಥಳ - ಶಿವನೇರುದುರ್ಗ

4. ಶಿವಾಜಿಯ ಬ್ಯಾಲಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ತಾಯಿ ಜೀಜಾಬಾಯಿಯೇ ಶಿವಾಜಿಯ ಭವಿಷ್ಯ ರೂಪಿಸಿದಳು.ಅವಳು ರಾಮಾಯಣ, ಮಹಾಭಾರತ ಮುಂತಾದ ಕಾವ್ಯ ಪುರಾಣಗಳ ವೀರಾಧಿವೀರರ ಕಥೆಗಳನ್ನು ತನ್ನ



Scanned with OKEN Scanner

ಮಗನಿಗೆ ಹೇಳುತ್ತ ಅವನಲ್ಲಿ ಧರ್ಮರಕ್ಷಣೆ, ದೇಶಾಭಿಮಾನದ ಮನೋಭಾವವನ್ನು ಪ್ರಚೋದಿಸಿದ್ದಳು.☑

B. ಗುರುವಾಗಿದ್ದ ದಾದಾಜಿ ಕೊಂಡದೇವ ಮತ್ತು ತಾನಾಜಿ ಮಾಲಸುರೆ ಶಿವಾಜಿಗೆ ಶಸ್ತ್ರಾಸ್ತ್ರ ವಿದ್ಯೆ ಕಲಿಸಿ, ಈ ತರುಣ ವೀರನ ಮನಸ್ಸನ್ನು ಜಾಗೃತಗೊಳಿಸಿದರು.☑

C. ಪ್ರಾರಂಭದಲ್ಲಿ ಶಿವಾಜಿಯು ಮರಾಠ ಮುಖಂಡರು ಮತ್ತು ಪಶ್ಚಿಮ ಘಟ್ಟಗಳ ಮಾವಳಿಯೆಂಬ ದೃಢಕಾಯರಾದ ಗಿರಿಜನರನ್ನು ಸೇರಿಸಿ ತರುಣರ ಪಡೆಯನ್ನು ಕಟ್ಟಿದನು.☑

- ಈ ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

5. ಶಿವಾಜಿಯನ್ನು ಸೋಲಿಸಲು ಬಂದ ವಿಜಯಪುರ ಸುಲ್ತಾನನ ಸೇನಾನಿ

- ಅಫಜಲ್ ಖಾನ್

6. ಅಫ್ಜಲ್ ಖಾನನನ್ನು ಸಂಹರಿಸಲು ಶಿವಾಜಿ ಬಳಸಿದ ಆಯುಧ - 'ವ್ಯಾಘ್ರನಖ',

7. ಶಿವಾಜಿಯನ್ನು ಸೋಲಿಸಲು ಬಂದ ಮೊಘಲ್ ದೊರೆ ಔರಂಗಜೇಬನ ಸೇನಾನಿ

- ಷಯಿಸ್ತಾಖಾನ್

8. ಶಿವಾಜಿಯನ್ನು ಉಪಾಯದಿಂದ ಆಗ್ರಾಕ್ಕೆ ಕರೆದುಕೊಂಡು ಹೋದವರು

- ಜೈಸಿಂಗ್

9. ಶಿವಾಜಿಯ ಪಟ್ಟಾಭಿಷೇಕವು ರಾಜಧಾನಿಯಾದ ರಾಯಗಡದಲ್ಲಿ ಅತ್ಯಂತ ವೈಭವದಿಂದ ನಡೆಯಿತು. ಅವನು "ಛತ್ರಪತಿ'. ಎಂಬ ಬಿರುದು ಧರಿಸಿ ತನ್ನ ರಾಜ್ಯವನ್ನು ''ಹಿಂದವೀ ಸ್ವರಾಜ್ಯ' ಎಂದು ಕರೆದ.



Scanned with OKEN Scanner

10. ಶಿವಾಜಿಗೆ ಆಡಳಿತದಲ್ಲಿ ನೆರವಾಗಲು ಇದ್ದ ಎಂಟು ಜನ ಮಂತ್ರಿಗಳು

- ಅಷ್ಟಪ್ರಧಾನರು.

11. ಚಿಕ್ಕ ಚಿಕ್ಕ ತಂಡಗಳಲ್ಲಿ ಶತ್ರುಗಳ ಮೇಲೆ' ಹಠಾತ್ತನೆ ದಾಳಿ, ಮಾಡುವ ಶತ್ರುಗಳಿಗೆ ಕಾಟ ಕೊಡುವ ಯುದ್ಧತಂತ್ರವೇ - ಗೆರಿಲ್ಲ ಯುದ್ಧತಂತ್ರ

ಕಾಲಗಣನೆ

1. ಬಾಬರ್ - 1526 -1530
2. ಅಕ್ಬರ್ - 1556 - 1605
3. ಔರಂಗಜೇಬ್ - 1659 - 1707
4. ಶಿವಾಜಿ - 1627 - 1680

NAVACHETANA EDUCATIONS
7019752139



Scanned with OKEN Scanner